ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 17 | ಏಪ್ರಿಲ್ 26, 1981 | ಬೆಲೆ : 50 ಪೈಸೆ

ಸರಕಾರಕ್ಕೆ ಸೋಲು

ಇದೇ 15-4-81ರಂದು ಸುಪ್ರೀಂ ಕೋರ್ಟ್ ಜೀವವಿಮಾ ಸಂಸ್ಥೆಯ ನೌಕರರಿಗೆ ನವೆಂಬರ್ 80ರಲ್ಲಿ ಕೊಟ್ಟ ತೀರ್ಮಾನದಂತೆ 1974ರಲ್ಲಿ ಆಗಿದ್ದ ಪರಸ್ಪರ ಒಪ್ಪಂದದನ್ವಯ ಶೇ. 15ರಷ್ಟು ಬೋನಸ್ಸನ್ನು ಮೂರನೇ ಮತ್ತು ನಾಲ್ಕನೇ ವರ್ಗದ ನೌಕರರಿಗೆ ಬಟವಾಡೆ ಮಾಡಬೇಕೆಂದೂ, ಅದಕ್ಕೆ ಶೇ. 12ರಂತೆ ಬಡ್ಡಿಯನ್ನು ಸೇರಿಸಿ ಕೊಡಬೇಕೆಂದೂ ತೀರ್ಮಾನ ಕೊಟ್ಟಿತು. ಅದನ್ನು ವಿತರಣೆ ಮಾಡಲು ಒಂದು ವಾರದ ಅವಧಿ ಕೊಡಲಾಗಿತ್ತು. ಆದರೆ ಕೋರ್ಟಿನ ಈ ಆಜ್ಞೆಯನ್ನು ಪ್ರಶ್ನಿಸಿ ಕೇಂದ್ರ ಸರಕಾರ ರಾಷ್ಟ್ರಾಧ್ಯಕ್ಷರ ಮೂಲಕ ಕೆಲವು ಅಂಶಗಳ ಬಗ್ಗೆ ಸ್ಪಷ್ಟೀಕರಣ ಕೇಳುವ ನೆಪದಲ್ಲಿ ಏಪ್ರಿಲ್ 15ರ ನ್ಯಾಯಾಲಯದ ಆಜ್ಞೆಯನ್ನು ಮುಂದೂಡಲು ಮನವಿ ಮಾಡಿಕೊಂಡಿತು. ಇದು ತಾ. 22ರಂದು ವಿಚಾರಣೆಗೆ ಬಂದು ನ್ಯಾಯಾಲಯವು ಈ ಪ್ರಾರ್ಥನೆಯನ್ನು ತಳ್ಳಿ ಹಾಕಿದೆ.

ಎಲ್. ಐ. ಸಿ. ನೌಕರರ ಸಂಬಳ ಸಾರಿಗೆ ಮತ್ತಿತರ ಸೌಲಭ್ಯಗಳ ಬಗ್ಗೆ ಕೇಂದ್ರ ಸರಕಾರ ಹಲವು ವರ್ಷಗಳಿಂದ ತನ್ನ ವಿರೋಧವನ್ನು

ಸಂಪಾದಕೀಯ

ವ್ಯಕ್ತಪಡಿಸಿಕೊಂಡು ಬಂದಿದೆ. ಇತರ ಕ್ಷೇತ್ರಗಳಲ್ಲಿ ದುಡಿಯುವ ನೌಕರರಿಗಿಂತ ಇವರಿಗೆ ಹೆಚ್ಚು ವರಮಾನ ಬರುತ್ತಿದೆಂದೂ, ದುಡಿಯುವವರ ಮಧ್ಯೆ ಇರುವ ವ್ಯತ್ಯಾಸವನ್ನು ಕಡಿಮೆ ಮಾಡಲು ಹೆಚ್ಚು ಸಂಬಳ ಬರುತ್ತಿರುವ ಎಲ್.ಐ.ಸಿ., ಬ್ಯಾಂಕು ಮುಂತಾದುವುಗಳ ನೌಕರರ ಸಂಬಳ ಸಾರಿಗೆಗಳನ್ನು ಸ್ಥಗಿತಗೊಳಿಸಿ. ಕ್ರಮೇಣ ಅದನ್ನು ಕಡಿಮೆಮಾಡುತ್ತಾ ಹೋಗಬೇಕೆಂದು ಸರ್ಕಾರವೂ, ಅದು ನೇಮಿಸಿದ ಭೂತಲಿಂಗಂ ಸಮಿತಿ ಮುಂತಾದ ಸಮಿತಿಗಳೂ ಶಿಫಾರಸು ಮಾಡಿವೆ. ಈ ಉದ್ದೇಶದಿಂದಲೇ ಕೇಂದ್ರ ಸರಕಾರ ಎಲ್. ಐ. ಸಿ.ಗೂ ಅದರ ನೌಕರರಿಗೂ 1974ರಲ್ಲಿ ಆದ ಒಪ್ಪಂದವನ್ನು ಮುರಿಯಿತು. ಈ ಧೋರಣೆಯಲ್ಲಿ ಕಾಂಗ್ರೆಸ್ಸಿಗೂ, ಜನತಾ ಪಾರ್ಟಿಗೂ, ಚರಣಸಿಂಗ್‌ರವರಿಗೂ ಯಾವ ವ್ಯತ್ಯಾಸವೂ ಇರಲಿಲ್ಲ. ಆದರೆ ನೌಕರರು ಸರಕಾರದ ವಿರುದ್ಧ ಸುಪ್ರೀಂಕೋರ್ಟಿನಲ್ಲಿ ವಾದ ಮಾಡಿ ನವೆಂಬರ್, 1980ರಲ್ಲಿ ತಮ್ಮ ಪರವಾಗಿ ತೀರ್ಮಾನ ಪಡೆದರು. ಅದನ್ನು ತಡೆಯಲು ಸರ್ಕಾರ ಸುಗ್ರೀವಾಜ್ಞೆಯನ್ನು ಹೊರಡಿಸಿತು. ನಂತರ ಒಂದು ಕಾಯಿದೆಯನ್ನು ಸಹ ವಿರೋಧ ಪಕ್ಷಗಳ ಪ್ರತಿಭಟನೆಯನ್ನೆಲ್ಲಾ

(ಕಡೇ ಪುಟ ನೋಡಿ)

ಕಲಕತ್ತೆಯಲ್ಲಿ ಕಾಂಗ್ರೆ ಹಿಂಸಾಚಾರ

ಮುಗ್ಧರ ಬಲಿ



(ವಿವರ ಕೊನೆ ಪುಟದಲ್ಲಿ)

ಪ್ರಗತಿಪರ ಜನತಂತ್ರರಂಗದ ಕರೆಯ ಮೇರೆಗೆ

ರಾಜ್ಯಾದ್ಯಂತ ಯಶಸ್ವೀ ಧರಣಿ ಸತ್ಯಾಗ್ರಹ

ಕರ್ನಾಟಕ ಪ್ರಗತಿಪರ ಜನತಂತ್ರ ರಂಗದ ಕರೆಯ ಮೇರೆಗೆ 12 ಅಂಶಗಳ ಬೇಡಿಕೆ ಈಡೇರಿಕೆ ಮತ್ತು ನಿಪ್ಪಾಣಿ ರೈತರ ಮೇಲೆ ನಡೆದ ಗೋಳಿಬಾರ್ ವಿಚಾರಣೆಗೆ ಒತ್ತಾಯಿಸಿ 20-4-81ರಂದು ರಾಜ್ಯಾದ್ಯಂತ ಯಶಸ್ವೀ ಧರಣಿ ಸತ್ಯಾಗ್ರಹ ನಡೆಸಿದ ವರದಿಗಳು ಬಂದಿವೆ.

ಫೆಬ್ರವರಿ 5ರಂದು ರೈತರ ಬೃಹತ್ ಜಾಥಾ ಸಮಯದಲ್ಲಿ ಸರಕಾರಕ್ಕೆ 12 ಅಂಶಗಳ ಬೇಡಿಕೆ ಈಡೇರಿಸಬೇಕೆಂದು ಒತ್ತಾಯಿಸಲಾಗಿತ್ತು. ಸರಕಾರ ಈ ಬಗ್ಗೆ ಯಾವುದೇ ಕ್ರಮ ವಹಿಸಲು ಮುಂದಾಗದ್ದರಿಂದ ಪುನಃ ಒತ್ತಾಯಿಸಲು ಧರಣಿ ಸತ್ಯಾಗ್ರಹಕ್ಕೆ ಕರೆಕೊಡಲಾಗಿತ್ತು. ಮೊದಲು ನಿರ್ಧರಿಸಿದಂತೆ ಮಾರ್ಚ್ 23ರಂದೇ ಈ ಧರಣಿ ಸತ್ಯಾಗ್ರಹ ಕಾರ್ಯಕ್ರಮವಾಗಬೇಕಿತ್ತು. ಮಾರ್ಚ್ 26ರ ದೆಹಲಿ ರೈತಜಾಥಾ ನಿಮಿತ್ತ ಏಪ್ರಿಲ್ 20ಕ್ಕೆ ಮುಂದೂಡಲಾಗಿತ್ತು. ನಮಗೆ ಲಭ್ಯವಾದ ವರದಿ ಈ ರೀತಿ ಇವೆ:

ಬೆಂಗಳೂರು

ಏಪ್ರಿಲ್ 20ರ ಬೆಳಿಗ್ಗೆ ಬೆಂಗಳೂರಿನ ಡಿ. ಸಿ. ಆಫೀಸಿನ ಎದುರು ನಡೆದ ಧರಣಿ ಸತ್ಯಾಗ್ರಹದಲ್ಲಿ ನೂರಾರು ರೈತರು ಭಾಗವಹಿಸಿದ್ದರು. ಧರಣಿ ಪ್ರಾರಂಭಿಸುವ ಮೊದಲು ಡಿ. ಸಿ. ಆಫೀಸಿನ ಆವರಣದಲ್ಲಿ ಮೆರವಣಿಗೆ ಸಭೆ ಮಾಡಲಾಯಿತು.

ಸಭೆಯನ್ನುದ್ದೇಶಿಸಿ ವಿಧಾನ ಪರಿಷತ್ ಸದಸ್ಯ ಕಾಂಗ್ರೆಸ್‌ನ ಶ್ರೀ ಆರ್. ಎಲ್. ಜಾಲಪ್ಪ, ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷರಾದ ಕಾಂ. ಎಚ್. ಮುಗುವಾಳಪ್ಪ, ಜನತಂತ್ರ ರಂಗದ ಕಾರ್ಯದರ್ಶಿಗಳಾದ ಕಾಂ. ಎಂ. ಸಿ. ವೆಂಕಟ್ರಾಂ, ಸಿ.ಪಿ.ಐ. ರಾಜ್ಯ ಕಾರ್ಯದರ್ಶಿ ಕಾಂ. ಎಂ. ಎಸ್. ಕೃಷ್ಣನ್, ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್, ಎ.ಐ.ಟಿ.ಯು.ಸಿ.ಯ ಶ್ರೀರಾಮುಲು, ಜಿಲ್ಲಾ ಪ್ರಗತಿಪರ ಜನತಂತ್ರ ರಂಗದ ಸಂಚಾಲಕರಾದ ಕಾಂ. ಪಿ. ಜಗನ್ನಾಥ, ಜಿ. ಎಂ. ವೆಂಕಟೇಶ್ ಮೊದಲಾದವರು ಮಾತನಾಡಿದರು. ಬೇಡಿಕೆಗಳನ್ನು ಈಡೇರಿಸದಿದ್ದರೆ ಚಳುವಳಿ ತೀವ್ರಗೊಳಿಸುವುದಾಗಿ ಸರಕಾರಕ್ಕೆ ಎಚ್ಚರಿಕೆ ನೀಡಲಾಯಿತು.

ಜಿಲ್ಲಾಧಿಕಾರಿಗಳಿಗೆ ಬೇಡಿಕೆಗಳ ಬಗ್ಗೆ ಮನವಿ ಸಲ್ಲಿಸಲಾಯಿತು. ಸಾಯಂಕಾಲದವರೆಗೆ ಧರಣಿ ಸತ್ಯಾಗ್ರಹ ನಡೆಯಿತು.

ಮಂಗಳೂರು

ಏ. 20ರ ಬೆಳಿಗ್ಗೆ ಬೃಹತ್ ಸಂಖ್ಯೆಯಲ್ಲಿ ರೈತರು, ಕಾರ್ಮಿಕರು ಡಿ.ಸಿ. ಆಫೀಸೆದುರು ಸಮಾವೇಶಗೊಂಡು ಧರಣಿ ಸತ್ಯಾಗ್ರಹ ಪ್ರಾರಂಭಿಸಿದರು. ಸಾಯಂಕಾಲದವರೆಗೂ ಧರಣಿ ಸತ್ಯಾಗ್ರಹ ನಡೆಯಿತು. ಧರಣಿ ಸತ್ಯಾಗ್ರಹದ ನೇತೃತ್ವವನ್ನು ಪ್ರಾಂತ ರೈತಸಂಘದ ಪ್ರಧಾನಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್, ಸಿ.ಪಿ.ಐ. (ಎಂ)ನ ಕಾಂ. ಕೆ.ಆರ್. ಶ್ರೀಯಾನ್, ಜಿಲ್ಲಾ ರೈತಸಂಘದ ಕಾಂ. ಜನಾರ್ಧನ ನಾಯ್ಕ ಮತ್ತು ಅಬ್ರಹಾಂ ಕರ್ಕಡ, ಕಾಂಗ್ರೆಸ್ (ಯು)ನ ಶ್ರೀ ಸುಬ್ಬಯ್ಯಶೆಟ್ಟಿ, ಸಿ.ಪಿ.ಐ.ನ ಕಾಂ. ಮೋನಪ್ಪಶೆಟ್ಟಿ ಮೊದಲಾದವರು ವಹಿಸಿದ್ದರು. ಸಂಜೆ ಬಹಿರಂಗ ಸಭೆ ನಡೆಯಿತು. ಜಿಲ್ಲಾಧಿಕಾರಿಗೆ ಮನವಿ ಕೊಡಲಾಯಿತು.

ಮೈಸೂರು

ಏ. 20ರಂದು ಮೈಸೂರು ಟೌನ್ ಹಾಲ್ ಮೈದಾನದಲ್ಲಿ ರೈತರು ಕಾರ್ಮಿಕರು ಸೇರಿ ಮೆರವಣಿಗೆ ಹೊರಟು ಮಧ್ಯಾಹ್ನ 1-30 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಅಲ್ಲಿ ವಿಶೇಷ ಜಿಲ್ಲಾಧಿಕಾರಿಗೆ ರೈತರ ಬೇಡಿಕೆಗಳ ಮನವಿ ಕೊಡಲಾಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್(ಯು) ಮುಖಂಡರು ಪ್ರದರ್ಶನದ ಮುಂದಾಳತ್ವ ವಹಿಸಿದ್ದರು. ಕೊಳ್ಳೇಗಾಲ, ಹುಣಸೂರು, ಹೆಗ್ಗಡದೇವನಕೋಟೆ ಮತ್ತಿತರ ಗ್ರಾಮಗಳಿಂದ ರೈತರು ಹೆಂಗಸರುಗಳಾದಿಯಾಗಿ ಬಂದಿದ್ದರು. ಹಲವಾರು ಕಾರ್ಖಾನೆಗಳಿಂದ ಕಾರ್ಮಿಕರೂ ಪಾಲ್ಗೊಂಡಿದ್ದರು. ಮನವಿ ಸಲ್ಲಿಸಿದ ನಂತರ ಪ್ರದರ್ಶನಕಾರರನ್ನುದ್ದೇಶಿಸಿ ಮುಖಂಡರು ಮಾತನಾಡಿದರು.

ಕೋಲಾರ

ಜನತಂತ್ರ ರಂಗದ ಆದೇಶದಂತೆ 20ರಂದು ಜಿಲ್ಲೆಯ ನಾನಾ ಕಡೆಗಳಿಂದ ಬಂದಿದ್ದ ಸುಮಾರು 300 ರೈತರು ಪುರಭವನದಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಸೇರಿದರು. ಡಿ. ಸಿ. ಕಚೇರಿ ಎದುರು ಧರಣಿ ಸತ್ಯಾಗ್ರಹ

(ಕಡೇ ಪುಟ ನೋಡಿ)

ಎಲ್ಲಾ ಕಾರ್ಮಿಕರಿಗೆ ಅಗತ್ಯ ಆಧಾರಿತ ಕನಿಷ್ಟ ವೇತನ ದೊರಕಿಸುವತ್ತ ಮುನ್ನಡೆ

—ವಿ. ಜೆ. ಕೆ. ನಾಯರ್

ಏಪ್ರಿಲ್ ೨೭ರಂದು ನಡೆಯಲಿರುವ ರಾಜ್ಯ ಮಟ್ಟದ, ಕನಿಷ್ಟ ಕೂಲಿಗೆ ಸಂಬಂಧಿಸಿದ ಸಮ್ಮೇಳನದ ನಿಮಿತ್ತ ಈ ವಿಶೇಷ ಲೇಖನ

ನಮ್ಮ ದೇಶದ ದುಡಿಯುವ ಜನರಲ್ಲಿ, ಸುಮಾರು ಅರ್ಧದಷ್ಟು ಜನ ಕನಿಷ್ಟ ವೇತನ ಕಾನೂನು ಮತ್ತು ಅದರ ಪ್ರಕಾರ ಹೊರಡಿಸಿದ ಸೂಚನೆಗಳ ವ್ಯಾಪ್ತಿಯಲ್ಲಿ ಬರುತ್ತಾರೆ. ಸಂಘಟಿತ ಕೈಗಾರಿಕೆಗಳಲ್ಲಿರುವ ಕಾರ್ಮಿಕರ ಸುಮಾರು ಶೇಕಡಾ 15 ಜನ, ಅಸಂಘಟಿತ ಕೈಗಾರಿಕೆಗಳಲ್ಲಿರುವ ಹೆಚ್ಚುಕಡಿಮೆ ಎಲ್ಲಾ ಕಾರ್ಮಿಕರು, ಮತ್ತು ಎಲ್ಲಾ ಕೃಷಿಕಾರ್ಮಿಕರು ತೀವ್ರ ಶೋಷಣೆಗೊಳಗಾಗಿರುವ ಕಾರ್ಮಿಕರು ಈ ಸಾಲಿಗೆ ಸೇರುತ್ತಾರೆ.

ಶೋಚನೀಯ ಪರಿಸ್ಥಿತಿಯಲ್ಲಿರುವ ರೈತಾಪಿವರ್ಗದ ಕೆಳವರ್ಗದವರು ಮತ್ತು ಸ್ವಯಂ ಉದ್ಯೋಗಿಗಳಾದ ಕುಶಲ ಕಸಬುಗಾರರನ್ನು ಈ ಮೇಲೆ ಹೇಳಿದ ಕಾರ್ಮಿಕರ ಜತೆ ಸೇರಿಸಿದರೆ ಬಡತನ ರೇಖೆಗೆ ಕೆಳಗೆ ಬದುಕುತ್ತಿರುವ ಶೇಕಡಾವಾರು ಜನಸಂಖ್ಯೆಯುಷ್ಟಾಗುತ್ತದೆ. ಇದು ಸರ್ಕಾರಿ ಅಂಕಿಅಂಶಗಳ ಪ್ರಕಾರ 48 ಶೇಕಡಾಕ್ಕಿಂತಲೂ ಹೆಚ್ಚು, ಸ್ವತಂತ್ರ ಅಂದಾಜುಗಳ ಪ್ರಕಾರ ಶೇಕಡಾ 70. ಬಡತನದ ರೇಖೆಗಿಂತ ಕೆಳಗಿರುವ ಜನಸಮುದಾಯವನ್ನು ಇದಕ್ಕಿಂತ ಮೇಲೆತ್ತಬೇಕಾದರೆ, ಪ್ರಗತಿಪರ ಕೃಷಿಕನೀತಿ, ಸಾಂಪ್ರದಾಯಿಕ ಕುಲಕಸಬುಗಳಿಗೆ ಪ್ರೋತ್ಸಾಹ, ಮತ್ತು ಕನಿಷ್ಟ ವೇತನ ಕಾನೂನಿನಡಿ ಬರುವ ಕಾರ್ಮಿಕರ ವೇತನ ಹೆಚ್ಚಳಕ್ಕೆ ಸತತ ಪ್ರಯತ್ನ ಇವು ಅಗತ್ಯ

ಸರ್ಕಾರದ ಕರ್ತವ್ಯ

ರಾಜನೀತಿಯ ನಿರ್ದೇಶನ ಸೂತ್ರಗಳು (ಸಂವಿಧಾನದ 4ನೇ ಖಂಡ) ಎಲ್ಲಾ ಜನರ ಜೀವನಮಟ್ಟ ಏರಿಸಲು ಅದರಲ್ಲೂ ಕೃಷಿಕಾರ್ಮಿಕರು ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ಜೀವನಾವಶ್ಯಕ ಕೂಲಿಕೊಡಲು ಕ್ರಮ ಕೈಗೊಳ್ಳುವುದು ಸರ್ಕಾರದ ಕರ್ತವ್ಯ ಎಂದು ನಿರ್ದೇಶಿಸುತ್ತದೆ. ಇಲ್ಲಿ ಅಗತ್ಯ ಕೂಲಿ ಎಂಬುದು ನ್ಯಾಯಬದ್ಧ ಕೂಲಿಗಿಂತಲೂ ಹೆಚ್ಚು ಮತ್ತು ನ್ಯಾಯಬದ್ಧ ಕೂಲಿ ಅಗತ್ಯ ಆಧಾರಿತ ಕನಿಷ್ಟ ಕೂಲಿಗಿಂತ ಹೆಚ್ಚು ಎಂದು ಗಮನಿಸಬೇಕು. ತನ್ನ ಉದ್ಯೋಗಿಗಳಿಗೆ ಅಗತ್ಯ ಆಧಾರಿತ ಕನಿಷ್ಟ ವೇತನ ಕೊಡದ ಯಾವುದೇ ಕೈಗಾರಿಕೆಗೆ ಅಸ್ತಿತ್ವದಲ್ಲಿರಲು ಹಕ್ಕಿಲ್ಲ ಎಂದು ಸುಪ್ರೀಂಕೋರ್ಟು ಸಾರಿದೆ.

ಕನಿಷ್ಟ ವೇತನ ಕಾನೂನಿನ ಪಾತ್ರ

ಕಷ್ಟದುಡಿಮೆಯ ಕೈಗಾರಿಕೆಗಳಲ್ಲಿ ಕಾರ್ಮಿಕರ ವೇತನ ಏರಿಸಲು ಕನಿಷ್ಟ ವೇತನ ಕಾನೂನು ಸರ್ಕಾರದ ಕೈಯಲ್ಲಿ ಒಂದು ದೊಡ್ಡ ಅಸ್ತ್ರ ಎಂದು ಪರಿಗಣಿಸಲಾಗುತ್ತದೆ. ಆದರೆ ಈ ಕಾನೂನನ್ನು, ಕಾರ್ಮಿಕರ ವೇತನವನ್ನು ಜೀವನಾಧಾರದ ಮಟ್ಟಕ್ಕಿಂತಲೂ ಕೆಳಗೆ ಇರಿಸಲು ಪಟ್ಟಭದ್ರ ಹಿತಾಸಕ್ತಿಗಳು ಉಪಯೋಗಿಸಿಕೊಂಡಿವೆ.

ಕನಿಷ್ಟವೇತನ ಬಡತನದ ರೇಖೆಗಿಂತ ಕೆಳಗೆ

ಈ ಕಾನೂನಿನ ಪ್ರಕಾರ ಹೊರಡಿಸಿರುವ ಸೂಚನೆಯಲ್ಲಿ ನಮೂದಿಸಿರುವ ಕನಿಷ್ಟವೇತನ, ಸುಪ್ರೀಂಕೋರ್ಟು ಹೇಳಿರುವ ಅಗತ್ಯ ಆಧಾರಿತ ಕನಿಷ್ಟ ವೇತನದ ಹತ್ತಿರ ಕೂಡಾ ಸುಳಿಯುವುದಿಲ್ಲ. ಬೇರೆಬೇರೆ ರಾಜ್ಯಸರ್ಕಾರಗಳು ನಮೂದಿಸಿರುವ ಕನಿಷ್ಟ ವೇತನಗಳು ದಿನಕ್ಕೆ 5ರೂ. ನಿಂದ ಹಿಡಿದು, ದಿನಕ್ಕೆ ರೂ. 1-50ರಷ್ಟು ಕಡಿಮೆ ಸಹ ಇದೆ. ಈ ರೀತಿ ಸರ್ಕಾರ ನಮೂದಿಸಿರುವ ಕನಿಷ್ಟ ವೇತನ ಬಡತನದ ರೇಖೆಗಿಂತಲೂ ಕೆಳಗೆ ಇದೆ. 'ಗರೀಬಿ ಹಟಾವೊ' ಘೋಷಣೆಯ ಮೇಲೆ ಅಧಿಕಾರಕ್ಕೆ ಬಂದ ಪಕ್ಷದ ಸರ್ಕಾರ, ಜೀವನಾವಶ್ಯಕ ಕೂಲಿ ಎಲ್ಲರಿಗೂ ಸಿಗಬೇಕು ಎನ್ನುವ ಸಂವಿಧಾನದ ನಿರ್ದೇಶನ ಮತ್ತು ಅಗತ್ಯ ಆಧಾರಿತ ಕೂಲಿ ಕೊಡದ ಕೈಗಾರಿಕೆಗಳ ಅಸ್ತಿತ್ವವನ್ನು ಪ್ರಶ್ನಿಸುವ ಸುಪ್ರೀಂ ಕೋರ್ಟಿನ ಆಜ್ಞೆಯನ್ನು ಪಾಲಿಸಬೇಕಾದ ಸರಕಾರ, ಬಡತನದ ರೇಖೆಗಿಂತಲೂ ಕೆಳಗೆ ಕನಿಷ್ಟ ಕೂಲಿಯನ್ನು ನಿರ್ಧರಿಸಿದೆ ಎಂಬುದು ವಿಪರ್ಯಾಸದ ಸಂಗತಿ. ಈ ಸರ್ಕಾರ ಅಗತ್ಯ ಆಧಾರಿತ ಕೂಲಿಯ ಬಗ್ಗೆ ತಲೆ ಕೆಡಿಸಿಕೊಂಡೇ ಇಲ್ಲ. ಸಂವಿಧಾನಾತ್ಮಕ ಜೀವನಾವಶ್ಯಕ ಕೂಲಿಯ ಮಾತಂತೂ ದೂರವೇ ಉಳಿಯಿತು.

ನಮೂದಿಸಿದ ಕನಿಷ್ಟ ಕೂಲಿ ಒಪ್ಪಿತ ಕೂಲಿಗಿಂತ ಕಡಿಮೆ

ಹಲವು ಸಂದರ್ಭಗಳಲ್ಲಿ ಕಾರ್ಮಿಕರು ತಮ್ಮ ಕಾರ್ಯಾಚರಣೆಗಳಿಂದಲೇ ನಮೂದಿಸಿದ ಕನಿಷ್ಟ ವೇತನಕ್ಕಿಂತ ಹೆಚ್ಚು ವೇತನ ಪಡೆಯುತ್ತಿದ್ದಾರೆ. ಮಾಲಿಕ-ಕಾರ್ಮಿಕ ಉಭಯ ಮಾತುಕತೆ, ಚೌಕಾಶಿ, ಒಪ್ಪಂದದ ಪ್ರಕಾರ ಜಾರಿಗೆ ಬಂದ ಈ ವೇತನಕ್ಕೆ ಒಪ್ಪಿತ ವೇತನ ಎನ್ನುತ್ತಾರೆ. ಕರ್ನಾಟಕದ ಪ್ಲಾಂಟೇಷನ್ ಕೈಗಾರಿಕೆಯಲ್ಲಿ ಒಪ್ಪಿತ ವೇತನ ರೂ. 7-20. ಆದರೆ ನಮೂದಿಸಿದ ಕನಿಷ್ಟ ವೇತನ ರೂ. 5-00. ಒಪ್ಪಂದಕ್ಕೆ ಸಹಿ ಹಾಕಿದವರು ಬಿಟ್ಟು ಬೇರೆ ಮಾಲೀಕರು ಈ ಒಪ್ಪಿತ ಕೂಲಿ ಕೊಡಬೇಕೆಂದು ಕಟ್ಟುಪಾಡು ಏನಿಲ್ಲ. ಇಂತಹ ಹಲವು ಮಾಲೀಕರು ಹೆಚ್ಚೆಂದರೆ ಕನಿಷ್ಟ ಕೂಲಿ ಕೊಡುತ್ತಾರೆ ಅಷ್ಟೆ. ಇಂತಹ ಮಾಲೀಕರ ಮೇಲೆ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಕಾಂಗ್ರೆಸ್ ಪಕ್ಷದಿಂದ ನಿರಂತರ ಆಳಲ್ಪಡುತ್ತಿರುವ ಕರ್ನಾಟಕ ರಾಜ್ಯ ಸರ್ಕಾರದ ಅಸಲಿ ಸ್ವರೂಪ ಇದರಿಂದಲೇ ಬಯಲಾಗುತ್ತದೆ. ಹೀಗೆ ಕನಿಷ್ಟ ವೇತನ ಕಾನೂನಿನ ಪ್ರಕಾರ ನಮೂದಿಸಿದ ಕನಿಷ್ಟ ವೇತನ, ವೇತನ ಶ್ರೇಣಿಯನ್ನು ಏರಿಸುವ ಬದಲು ತಗ್ಗಿಸುವಲ್ಲಿ ಸಹಾಯ ಮಾಡುತ್ತಿದೆ.

ಎಡಪಂಥೀಯ ಸರ್ಕಾರಗಳ ನೀತಿ

ಬೀಡಿ, ಗೇರುಬೀಜ ಮುಂತಾದ ಕೈಗಾರಿಕೆಗಳಲ್ಲಿ ಕಾರ್ಮಿಕರು ನಿರಂತರ ತೀವ್ರ ಹೋರಾಟದಿಂದ ಸಂಬಳ ಏರಿಸಲು ಪ್ರಯತ್ನಿಸಿ ಸಫಲರಾದ ಕೂಡಲೇ, ಈ ಕೈಗಾರಿಕೆಗಳು ನೆರೆ ರಾಜ್ಯಗಳಿಗೆ ವಲಸೆ ಹೋಗಲಾರಂಭಿಸಿವೆ. ನೆರೆ ರಾಜ್ಯಗಳಲ್ಲಿ ಕೈಗಾರಿಕೆಗೆ ಬೇಕಾದ ವಾತಾವರಣ ಇದೆ–ಅಂದರೆ ಕಡಿಮೆ ಕೂಲಿ ಕೊಡಬಹುದು–ಎಂಬುದೇ ಈ ವಲಸೆಗೆ ಕಾರಣ. ಆದ್ದರಿಂದ ಕನಿಷ್ಟ ವೇತನವನ್ನು ಏರಿಸುತ್ತಾ ಹೋಗಬೇಕಾದರೆ ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ಅಗತ್ಯ. ಇದನ್ನು ಈ ಉದ್ದೇಶಕ್ಕೆ ಬದ್ಧವಾದ ಪ್ರಗತಿಪರ ಸರ್ಕಾರ ಅಥವಾ ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಹಕಾರ, ಸಂಘಟನಾತ್ಮಕ ಅನ್ಯೋನ್ಯತೆಯಿಂದ ಕೇಂದ್ರೀಯ ಕಾರ್ಮಿಕ ಸಂಘಗಳು ಸಾಧಿಸಬಹುದು.

ಅಸಂಘಟಿತ ಕಾರ್ಮಿಕರಿಗೆ ಸಂಘಟಿತ ಕಾರ್ಮಿಕರ ಬೆಂಬಲ

ಅಸಂಘಟಿತ ಕಾರ್ಮಿಕರ ಜೀವನಮಟ್ಟ ಗಣನೀಯವಾಗಿ ಏರದೆ, ಸಂಘಟಿತ ಕಾರ್ಮಿಕರ ವೇತನ ಏರಿಕೆ ಹೋರಾಟ ಸಫಲವಾಗದು. ಈ ಪ್ರಸಕ್ತ ಪರಿಸ್ಥಿತಿಯನ್ನು ಬದಲಿಸದೆ ತಮ್ಮ ಜೀವನಮಟ್ಟವನ್ನು ಇನ್ನೂ ಹೆಚ್ಚಿಗೆ ಏರಿಸಲಾಗದ ಘಟ್ಟಕ್ಕೆ ಸಂಘಟಿತ ಕಾರ್ಮಿಕರ ಚಳುವಳಿ ಬಂದು ನಿಂತಿದೆ. ಆಳುವ ವರ್ಗಗಳು "ಅಧಿಕ ವೇತನ ದ್ವೀಪ"ಗಳ ಮೇಲೆ ದಾಳಿಯ ಬಗ್ಗೆ ಆಗಾಗ ಕೂಗು ಹಾಕುತ್ತಿವೆ. ಸಂಘಟಿತ ಕಾರ್ಮಿಕರ ವಿರುದ್ಧ ಹಳ್ಳಿಯ ಅಸಂಘಟಿತರು, ನಿರುದ್ಯೋಗಿಗಳು ಮತ್ತಿತರ ಶೋಷಿತ ಜನರನ್ನು ಎತ್ತಿಕಟ್ಟಲಾಗುತ್ತಿದೆ. ಸಂಘಟಿತ ಕಾರ್ಮಿಕವರ್ಗ ಚಳುವಳಿಯ ಮುನ್ನಡೆಗೆ ಇವು ತಡೆಯಾಗಿ ನಿಂತಿವೆ. ಈ ಪರಿಸ್ಥಿತಿಯನ್ನು ಸೂಕ್ತವಾಗಿ ಬದಲಿಸದಿದ್ದರೆ, ಇದು ಫ್ಯಾಸಿಸ್ಟ್ ಶಕ್ತಿಗಳು ಬೆಳೆಯಲು ಫಲಪ್ರದವಾದ ಪ್ರದೇಶವಾಗಬಹುದು. ಆದ್ದರಿಂದ ಸಂಘಟಿತ ಕಾರ್ಮಿಕವರ್ಗ, ಅಸಂಘಟಿತ ಕಾರ್ಮಿಕರ ವೇತನ ಮಟ್ಟ, ಜೀವನಮಟ್ಟ ಏರಿಸಲು ಮತ್ತು ಇಡೀ ಕಾರ್ಮಿಕ ವರ್ಗದ ಚಳುವಳಿಯನ್ನು ರಕ್ಷಿಸಿಕೊಳ್ಳಲು, ಅಸಂಘಟಿತರನ್ನೊಳಗೊಂಡಂತೆ ಪ್ರಬಲ ಚಳುವಳಿಗಳನ್ನು ಕಟ್ಟಬೇಕಾಗಿದೆ.

ಹೈದರಾಬಾದ್ ಸಮಾವೇಶ

ಇಂತಹ ಹಿನ್ನೆಲೆಯಲ್ಲಿ, ಕನಿಷ್ಟ ಕೂಲಿ ಕಾನೂನಿನ ವ್ಯಾಪ್ತಿಗೆ ಸೇರಿದ ಎಲ್ಲಾ ಕಾರ್ಮಿಕರ ಒಂದು ಸಮಾವೇಶವನ್ನು ಹೈದರಾಬಾದಿನಲ್ಲಿ ನಡೆಸಲು ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಗಳು ನಿರ್ಧರಿಸಿವೆ. ಈ ಸಮಾವೇಶ ದಕ್ಷಿಣದ ಎಲ್ಲಾ ನಾಲ್ಕು ರಾಜ್ಯಗಳಲ್ಲೂ ಈ ಬಗ್ಗೆ ಸುಸಂಘಟಿತ ಚಳುವಳಿ ನಡೆಸಲು ತಕ್ಕ ಯೋಜನೆಯನ್ನು ರೂಪಿಸಲಿದೆ.

ಬೆಂಗಳೂರು ಸಮಾವೇಶ

ಹೈದರಾಬಾದು ಸಮಾವೇಶಕ್ಕೆ ಪೂರ್ವಸಿದ್ಧತೆಯಾಗಿ, ಎ.ಐ.ಟಿ.ಯು.ಸಿ., ಸಿ.ಐ.ಟಿ.ಯು. ಮತ್ತು ಹೆಚ್.ಎಂ.ಎಸ್. ಕನಿಷ್ಟ ಕೂಲಿ ಕಾನೂನಿನ ವ್ಯಾಪ್ತಿಗೆ ಬರುವ ಕೈಗಾರಿಕೆಗಳಲ್ಲಿ ಕೆಲಸಮಾಡುತ್ತಿರುವ ಕರ್ನಾಟಕದ ಎಲ್ಲಾ ಕಾರ್ಮಿಕರ ಸಮಾವೇಶವೊಂದನ್ನು ಏರ್ಪಡಿಸಲು ನಿರ್ಧರಿಸಿವೆ. ಈ ಸಮಾವೇಶ ಅತ್ಯಧಿಕ ಶೋಷಣೆಗೆ ಒಳಗಾಗಿರುವ ಸಮಾಜದ ವಿಭಾಗಗಳ ಚಳುವಳಿಯನ್ನು ಬೆಳೆಸಲು ಭದ್ರಬುನಾದಿ ಹಾಕುವ ನಿರೀಕ್ಷೆ ಇದೆ. ಈ ಚಳುವಳಿಗೆ ಸರಿಯಾದ ನಾಯಕತ್ವ ದೊರೆತರೆ ದೇಶದ ರಾಜಕೀಯ ಬೆಳವಣಿಗೆಯ ದಿಕ್ಕೇ ಇದರಿಂದ ಬದಲಾಗುವ ಸಾಧ್ಯತೆ ಇದೆ.

o

ಟ್ರೈನೀ ಕಾರ್ಮಿಕರಿಗೆ ಬೋನಸ್ಸು

ತಾ. 8-4-81ರಂದು ಕೆನರಾ ವರ್ಕ್‌ಷಾಪಿನ ಕೆಲಸಗಾರರ ಮಹಾಸಭೆಯು ಕಾಂ. ಕೆ. ಶಂಕರ ಕದ್ರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.)ನ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರ ರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾಂ. ಸಿ. ನಾರಾಯಣರವರು ಸ್ವಾಗತ ಬಯಸಿ ಸಭೆ ಕರೆದ ಉದ್ದೇಶವನ್ನು ವಿವರಿಸಿದರು.

ಇತ್ತೀಚೆಗೆ ಕೆನರಾ ವರ್ಕ್‌ಷಾಪಿನ ಮಾಲಕರೊಡನೆ ಕಾಂ. ಪಿ. ರಾಮಚಂದ್ರ ರಾವ್‌ರವರು ನಡೆಸಿದ ಮಾತುಕತೆಯ ವಿವರವನ್ನು ಸಭೆಗೆ ತಿಳಿಸಿದರು. ಕೆನರಾ ವರ್ಕ್‌ಷಾಪಿನಲ್ಲಿ ದುಡಿಯುವ ಟ್ರೈನೀ ವಿಭಾಗದ ಕಾರ್ಮಿಕರಿಗೆ 1976-77ರಿಂದ ಬೋನಸ್ಸು ಸವಲತ್ತನ್ನು ಕೊಡಲು ಕಂಪೆನಿಯ ಮಾಲಕರು ಒಪ್ಪಿರುವುದನ್ನು ಸಭೆಗೆ ವಿವರಿಸಿದರು. ಫ್ಯಾಕ್ಟರಿಯೊಳಗೆ ಅವಘಡಕ್ಕೊಳಗಾದ ಮೂವರು ಕಾರ್ಮಿಕರಿಗೆ ಸೂಕ್ತ ಪರಿಹಾರ ಧನವನ್ನೂ ಸೌಹಾರ್ದ ಒಪ್ಪಂದದ ಮೂಲಕ ನೀಡಲು ಮಾಲಕರು ಒಪ್ಪಿರುವುದನ್ನು ಸಭೆಗೆ ತಿಳಿಸಿದಾಗ ಸಂತೋಷದಿಂದ ಸ್ವಾಗತಿಸಲಾಯಿತು.

ಇಂದಿನ ಸರ್ಕಾರದ ನೀತಿ, ಬೆಲೆ ಏರಿಕೆ, ದೈನಂದಿನ ಪರಿಸ್ಥಿತಿ ಎಲ್ಲವನ್ನು ಅರ್ಥಮಾಡಿಕೊಂಡು ಕಾರ್ಮಿಕರು ತಮ್ಮ ಹಕ್ಕುಗಳನ್ನು ಶೋಷಣೆಯಿಂದ ರಕ್ಷಿಸಿಕೊಳ್ಳಲು ಸಂಘಟನೆಯನ್ನು ಹೆಚ್ಚು ಹೆಚ್ಚು ಬೆಳೆಸಿ ಸಿ. ಐ. ಟಿ. ಯು.ವನ್ನು ಬಲಪಡಿಸಬೇಕೆಂದು ಕರೆ ನೀಡಿದರು.

ಅಧ್ಯಕ್ಷಸ್ಥಾನದಿಂದ ಕಾಂ. ಕೆ. ಶಂಕರ ಕದ್ರಿಯವರ ಭಾಷಣದ ನಂತರ ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.

ದುದ್ದದಲ್ಲಿ ನಡೆದದ್ದೇನು?

14-4-81ರಂದು ಪ್ರಗತಿಪರ ಜನತಂತ್ರ ರಂಗದ ವತಿಯಿಂದ ವಿರೋಧ ಪಕ್ಷದ ನಾಯಕರಾದ ಕಾಂಗ್ರೆಸ್ (ಯು)ನ ಶ್ರೀ ಡಿ. ಬಿ. ಚಂದ್ರೇಗೌಡ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಸಿ. ನಂಜುಂಡಪ್ಪ ಮತ್ತು ಬಿ. ಡಿ. ರಾಮಯ್ಯ, ಸಿ.ಪಿ.ಐ.ನ ಕಾಂ. ವೆಂಕಟ್ರಾಮು ಇವರುಗಳು ದುದ್ದದಲ್ಲಿ ನಡೆದ ಪೋಲೀಸ್ ಗೋಲೀಬಾರ್‌ನ ಬಗ್ಗೆ ಸತ್ಯಾಂಶಗಳನ್ನು ತಿಳಿಯಲು ಮತ್ತು ಮೃತರ ಕುಟುಂಬಗಳನ್ನು ಖುದ್ದಾಗಿ ಭೇಟಿಯಾಗಿ ಸಂತಾಪ ಸೂಚಿಸಲು ದುದ್ದ, ಜೋಡಿ ಕೃಷ್ಣಾಪುರ ಮತ್ತು ಹಿರಿಕಡಲೂರಿಗೆ ಭೇಟಿಯಿತ್ತರು.

"ಮಧ್ಯಾಹ್ನ 1 ಘಂಟೆಯ ಸಮಯ. ದುದ್ದ ಪೋಲೀಸ್ ಠಾಣೆಯ ಮುಂದೆ ಕಾರು ನಿಲ್ಲಿಸಿ ಕೆಳಗಿಳಿದಾಗ ದುದ್ದ ಗ್ರಾಮ ಪೋಲೀಸ್ ಮಂತ್ರಿಗೆಯಲ್ಲಿ ಸಿಕ್ಕಿಬಿದ್ದಂತೆ ಕಂಡಿತು. ಏಕೆಂದರೆ ಕಣ್ಣುಹಾಯಿಸಿದೆಡೆ ಪೋಲೀಸರಿದ್ದರು. ಮೊದಲು ಪೋಲೀಸರಿಂದಲೇ ವಿವರಣೆ ಕೇಳಬೇಕೆಂದು ನಿರ್ಧರಿಸಿ ಪೋಲೀಸ್ ಠಾಣೆಯ ಒಳಗೆ ಹೋದೆವು. ರಾಯರ ಜನಮರ್ಧನ ನೀತಿಯನ್ನು ಕರಾರುವಾಕ್ಕಾಗಿ ಜಾರಿಗೆ ತಂದ ದುದ್ದ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್ ಮತ್ತು ಡಿ.ವೈ.ಎಸ್.ಪಿ. ಅವರೆಲ್ಲ ಅಲ್ಲಿಯೇ ಇದ್ದರು. ಚಂದ್ರೇಗೌಡರ ಪ್ರಶ್ನೆಗಳಿಗೆ ಪೋಲೀಸ್ ಅಧಿಕಾರಿಗಳು ಈ ಕೆಳಗಿನ ವಿವರಣೆ ಇತ್ತರು".

"11-4-81ರಂದು ಬೆಳಿಗ್ಗೆ ಸುಮಾರು 15 ಜನ ರೈತರು ರಸ್ತೆಗೆ ಅಡ್ಡವಾಗಿ ವಾಹನ ತಡೆಯುವ ಚಳುವಳಿಯನ್ನು ಶಾಂತವಾಗಿ ಪ್ರಾರಂಭಿಸಿದರು. ಇವರನ್ನು ಬಂಧಿಸಲಾಯಿತು. ಮತ್ತೆ 20 ಜನರ ಗುಂಪೊಂದು ಅದೇ ಸ್ಥಳದಲ್ಲಿ ಕುಳಿತುಕೊಂಡರು. ಮಧ್ಯಾಹ್ನ 2 ಘಂಟೆಯವರೆಗೂ ಯಾವ ಅಹಿತಕರ ಘಟನೆಯೂ ನಡೆಯಲಿಲ್ಲ. ರಸ್ತೆ ಸಮೀಪದಲ್ಲಿ ಬೆಳಿಗ್ಗೆ 9 ಘಂಟೆಯಿಂದ ಪ್ರಾರಂಭವಾದ ದುದ್ದದ ಸಂತೆಯೂ ನಡೆಯುತ್ತಿತ್ತು. 2-30ರ ಸಮಯದಲ್ಲಿ ಅಂಗಡಿಗಳನ್ನು ಲೂಟಿ ಮಾಡುತ್ತಿದ್ದಾರೆ ಎಂಬ ವರ್ತಮಾನ ಹರಡಿತು. ಕೂಡಲೇ ಸಬ್‌ಇನ್‌ಸ್ಪೆಕ್ಟರು ಹಾಸನದಲ್ಲಿರುವ ಸರ್ಕಲ್ ಇನ್‌ಸ್ಪೆಕ್ಟರವರಿಗೆ ಫೋನ್‌ಮಾಡಿ ಹೆಚ್ಚಿನ ಸಿಬ್ಬಂದಿಯೊಡನೆ ಬರಬೇಕೆಂದು ವಿನಂತಿಸಿದರು. 3 ಘಂಟೆಗೆ ಸರ್ಕಲ್ ಇನ್‌ಸ್ಪೆಕ್ಟರವರು ಎರಡು ವ್ಯಾನು ತುಂಬ ಪೋಲೀಸರನ್ನು ತುಂಬಿಕೊಂಡು ಚಳುವಳಿಗಾರರಿದ್ದಲ್ಲಿ ಬಂದರು. ಜೀಪಿನಿಂದ ಇಳಿದ ಸರ್ಕಲ್ ಇನ್‌ಸ್ಪೆಕ್ಟರರು ರಸ್ತೆ ಖಾಲಿ ಮಾಡುವಂತೆ ಚಳುವಳಿಗಾರರನ್ನು ಎಷ್ಟು ವಿನಂತಿಸಿದರೂ ಕೇಳಲಿಲ್ಲ. ಅವರನ್ನು ಎಳೆದುಹಾಕಲು ಯತ್ನಿಸಿದಾಗ ಪೋಲೀಸರ ಮೇಲೆ ಕಲ್ಲು ಬೀಳಲು ಪ್ರಾರಂಭವಾಯಿತು. ಪೋಲೀಸರು ಬೇರೆ ಮಾರ್ಗವಿಲ್ಲದೇ ವ್ಯಾನಿನೊಳಕ್ಕೆ ಹೋದಾಗ ಜನರು ವ್ಯಾನಿಗೇ ಬೆಂಕಿಹಚ್ಚಲು ಯತ್ನಿಸಿದರು. ನಿರ್ವಾಹವಿಲ್ಲದೇ ಗುಂಡುಹಾರಿಸಲಾಯಿತು" ಎಂದರು.

"ಪೋಲೀಸರಿಂದ ವಿವರಣೆ ಪಡೆದ ನಂತರ ರೈತರಿಂದ ವಿಷಯ ತಿಳಿಯಬೇಕೆಂದು ತೀರ್ಮಾನಿಸಿ ಗೋಲೀಬಾರ್ ನಡೆದ ಸ್ಥಳದ ಪಕ್ಕದಲ್ಲಿರುವ ಹೋಟೆಲ್‌ನಲ್ಲಿ ಕುಳಿತು ಗೋಲೀಬಾರ್ ಘಟನೆಯ ಪ್ರತ್ಯಕ್ಷದರ್ಶಿಗಳನ್ನು ಬರಮಾಡಿಕೊಳ್ಳಲಾಯಿತು. ಪ್ರತ್ಯಕ್ಷದರ್ಶಿಗಳು ಪೋಲೀಸರ ವಿವರಣೆಯನ್ನು ತಳ್ಳಿಹಾಕಿದರು.

"ಬೆಳಗಿನ ಸತ್ಯಾಗ್ರಹಿಗಳ ತಂಡವನ್ನು ಬಂಧಿಸಿದ ಮೇಲೆ ಮತ್ತೊಂದು 20 ಜನರ ತಂಡ ಕುಳಿತುಕೊಂಡಿತು. ಸುಮಾರು 2-45 ಘಂಟೆ ಸಮಯಕ್ಕೆ ಸರ್ಕಲ್ ಇನ್‌ಸ್ಪೆಕ್ಟರರ ಜೀಪು ಬಹಳ ವೇಗವಾಗಿ ಬಂದು ಸತ್ಯಾಗ್ರಹಿಗಳ ಸಮೀಪದಲ್ಲಿ ನಿಂತಿತು. ಜೀಪ್ ಹಿಂದೆ ಎರಡು ವ್ಯಾನುಗಳ ತುಂಬಾ ಬಂದೂಕುಧಾರಿ ಪೋಲೀಸರೂ ಬಂದಿಳಿದರು. ಸರ್ಕಲ್ ಇನ್‌ಸ್ಪೆಕ್ಟರರು ಕೂಡಲೇ ರಸ್ತೆ ಖಾಲಿಮಾಡುವಂತೆ ಗರ್ಜಿಸಿದರು. ನಾವು ಈ ದಿನ 5 ಘಂಟೆಯವರೆಗೆ ಸತ್ಯಾಗ್ರಹ ಮುಂದುವರಿಸುತ್ತೇವೆಂದು ಸತ್ಯಾಗ್ರಹಿಗಳು ತಿಳಿಸಿದಾಗ ಚಳುವಳಿಗಾರರನ್ನು ಬಲಾತ್ಕಾರದಿಂದ ರಸ್ತೆಯ ಬದಿಗೆ ಎಳೆದು ಹಾಕಲು ಯತ್ನಿಸಿದರು. ಚಳುವಳಿಗಾರರು ಪಟ್ಟುಹಿಡಿದು ಕುಳಿತು ನಮ್ಮನ್ನು ಬೇಕಾದರೆ ಬಂಧಿಸಿ ಎಂದರು. ನಿಮ್ಮಪ್ಪ ಕಟ್ಟಿಸಿದ ಜೈಲು ಇದೆಯೋ? ನಿಮ್ಮ ಹೆಂಡಂದಿರು ಬಂದು ಅಡಿಗೆಮಾಡಿ ಹಾಕುತ್ತಾರೆಯೋ? ಎಂದು ಸರ್ಕಲ್ ಇನ್‌ಸ್ಪೆಕ್ಟರ್ ಗುಡುಗುತ್ತ ಲಾಠೀ ಪ್ರಹಾರ ಪ್ರಾರಂಭಿಸಿದರು. ಪೋಲೀಸರೂ ಕೆಳಗಿಳಿದು ಚಳುವಳಿಗಾರರನ್ನು ಸಿಕ್ಕಾಪಟ್ಟೆ ಹೊಡೆಯತೊಡಗಿದರು. ಪೋಲೀಸರ ಏಟು ತಾಳಲಾರದೇ ಕಿರುಚುತ್ತಿದ್ದ ಚಳುವಳಿಗಾರರ ಕೂಗನ್ನು ಕೇಳಿ ಸಂತೆಯಲ್ಲಿದ್ದ ಜನ ರಸ್ತೆಯ ಬದಿಗೆ ಧಾವಿಸಿದರು. ಯಾರೋ ಪೋಲೀಸರ ಮೇಲೆ ಒಂದೆರಡು ಕಲ್ಲೆಸೆದರು. ಪೋಲೀಸರು ವ್ಯಾನಿನೊಳಕ್ಕೆ ಹೋಗಿ ಯಾವ ಸೂಚನೆಯನ್ನೂ ಕೊಡದೇ ಗುಂಡುಹಾರಿಸಿದರು. ಗುಂಡೇಟಿನಿಂದ 5 ಜನ ನೆಲಕಚ್ಚಿ ಬಿದ್ದರು. ಮೂವರು ಸ್ಥಳದಲ್ಲೇ ರಕ್ತ ಕಾರುತ್ತ ಪ್ರಾಣ ಬಿಟ್ಟರು. ಉಳಿದಿಬ್ಬರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಗಾಬರಿ ಬಿದ್ದ ಜನ ದಿಕ್ಕಾಪಾಲಾಯಿತು."

"ರೈತರ ವಿವರಣೆ ಕೇಳಿದ ಮೇಲೆ, ಪೋಲೀಸ್ ವ್ಯಾನಿಗೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಲು ಪ್ರಯತ್ನಿಸಿದ್ದು ನಿಜವಾ ಎಂದು ಕೇಳಿದಾಗ, ದೀಪ ಹಚ್ಚಲು ಎಣ್ಣೆ ಇಲ್ಲದಾಗ ಎರಚಲು ಎಣ್ಣೆ ಎಲ್ಲಿ ಸಿಗುತ್ತೆ ಸ್ವಾಮಿ! ಎಂದುತ್ತರಿಸಿದರು. ಪೋಲೀಸರು ಹಸೀ ಸುಳ್ಳನ್ನು ಹೇಳಿದ್ದಾರೆ. ಒಂದೆರಡು ಕಲ್ಲು ಬಿದ್ದಿದ್ದು ನಿಜ. ಅದೂ ಹೆಂಡತಿಯರ, ಅಪ್ಪಂದಿರ ಕುರಿತು ಅವಾಚ್ಯ ಮಾತನಾಡಿದಾಗ. ಕಲ್ಲು ಎಸೆಯಕೂಡದೆಂದು ಚಳುವಳಿಕಾರರು ಜನರನ್ನು ಸಮಾಧಾನಪಡಿಸುತ್ತಿರುವಾಗಲೇ ಪೋಲೀಸರು ಗುಂಡು ಹಾರಿಸಿದ್ದರು. ಗುಂಡು ಹಾರಿಸುವ ಪರಿಸ್ಥಿತಿ ಉಂಟಾಗಿರಲೇ ಇಲ್ಲ ಎಂದರು. ಓಟು ಹಾಕಿ ಏಟು ತಿನ್ನುತ್ತಿದ್ದೇವೆ ಎಂದೊಬ್ಬ ರೈತ".

"ಪೋಲೀಸರ ಗುಂಡಿಗೆ ಎದೆಯೊಡ್ಡಿ ಹುತಾತ್ಮನಾದ ಜವರೇಗೌಡ ಉರುಫ್ ಗೋಟಪ್ಪನವರ ಮನೆಗೆ ಹೋಗಿ ಅವರ ಹೆಂಡತಿ ಸುಬ್ಬಮ್ಮ ಮತ್ತು ಚಿಕ್ಕ ಮಕ್ಕಳನ್ನು ಸ್ವಾಂತನಪಡಿಸಿದೆವು. ಅಳುತ್ತಿದ್ದ ಸುಬ್ಬಮ್ಮನನ್ನು ಸಮಾಧಾನಪಡಿಸುತ್ತಾ ರೈತನೊಬ್ಬ ಜನತಂತ್ರರಂಗದ ಮುಖಂಡರ ಮನಸ್ಸಿಗೆ ನಾಟುವಂತೆ, ಅಳಬೇಡ ಬಿಡಮ್ಮಾ! ನಿನ್ನ ಗಂಡ ಸುಖಿ. ನಾವು ತಿನ್ನಲು ಕೂಳಿಲ್ಲದೇ ದಿನವೂ ಸಾಯುತ್ತಿದ್ದೇವೆ. ಅವ ಸತ್ತು ಸುಖವಾಗಿ ಮಲಗಿದ್ದಾನೆ ಎಂದನು. ಎಲ್ಲರೂ ಕಾರು ಹತ್ತಿ ವಾಪಸ್ ಹೊರಟಾಗ "ಇವರೇ ಅಲ್ಲವ ಇಂದಿರಮ್ಮನಿಗೆ ಸೀಟು ಬಿಟ್ಟುಕೊಟ್ಟೋರು"! ಎಂದದ್ದು ಕೇಳಿಸಿತು.

"ತನ್ನ ಮದುವೆಗೆ ಸಾಮಾನು ತರಲು ಹೋಗಿ ಗುಂಡೇಟಿಗೆ ತುತ್ತಾಗಿ ಮಡಿದ ನಟೇಶನ ಗ್ರಾಮವಾದ ಜೋಡಿ ಕೃಷ್ಣಾಪುರ ಗ್ರಾಮಕ್ಕೆ ಹೋದೆವು. ರಸ್ತೆಯ ಬದಿಯಲ್ಲಿ ನಟೇಶನ ಶವದ ಬೂದಿ ಇನ್ನೂ ಬಿಸಿಯಾಗೇ ಇತ್ತು. ನಟೇಶನ ತಾಯಿ ದೇವಿರಮ್ಮ ಅಗಲಿದ ಮಗನನ್ನು ನೆನೆಸುತ್ತ ಕಣ್ಣೀರು ಹಾಕುತ್ತಿದ್ದಳು. ಆ ತಾಯಿಯನ್ನು ಸ್ವಾಂತನಪಡಿಸುವದೊಂದು ಪ್ರಯಾಸದ ಕೆಲಸವಾಗಿತ್ತು".

"ಹಿರಿಕಡಲೂರಿನ ಬೋರಪ್ಪ ಪೋಲೀಸ್ ಗುಂಡಿಗೆ ಬಲಿಯಾದ ಹರಿಜನ ವ್ಯಕ್ತಿ. ಆ ಕುಟುಂಬವನ್ನು ಭೇಟಿ ಮಾಡಲು ಹೊರಟಾಗ ದಾರಿಯಲ್ಲಿ ಮೃತರ ಕುಟುಂಬಗಳನ್ನು ಭೇಟಿ ಮಾಡಲು ಬಂದಿದ್ದ ಧಾರವಾಡದ ಶ್ರೀ ಮಹಾದೇವಹೊರಟ್ಟಿ (ಕಾಂಗ್ರೆ) ಮತ್ತವರ ಸ್ನೇಹಿತರು ಸಿಕ್ಕರು. ಬೋರಪ್ಪನನ್ನು ಬಲಿತೆಗೆದುಕೊಂಡು ಆತನ ಇಬ್ಬರು ಗಂಡುಮಕ್ಕಳು ಮತ್ತು 4 ಹೆಣ್ಣುಮಕ್ಕಳನ್ನು ರಾಯರ ಸರಕಾರ ತಬ್ಬಲಿಮಾಡಿತ್ತು. ಊರವರ ಕಷ್ಟಸುಖಗಳಿಗೆ ಭಾಗಿಯಾಗಿದ್ದ ಬೋರಪ್ಪನ ನಿಧನದಿಂದ ಊರಿಗೆ ಊರೇ ಮಂಕಾಗಿತ್ತು. ಬೋರಪ್ಪ ರೈತವಿರೋಧಿ ಸರಕಾರದ ನೀತಿಯ ವಿರುದ್ಧ ಪ್ರಾಣಾರ್ಪಣೆಗೈದಿದ್ದ".

ದುದ್ದದ ದುರ್ಘಟನೆಯನ್ನು, ನರಗುಂದ-ನವಲಗುಂದ ರೈತರ ಹೋರಾಟವನ್ನು, ನಿಪ್ಪಾಣಿ ರೈತರ ಹೋರಾಟವನ್ನು ಗಮನಿಸಿದಾಗ ಗುಂಡೂರಾಯರ ಸರಕಾರದ ರಕ್ತಪಿಪಾಸೆ ತೀರಿಲ್ಲವೆಂಬುದು ಕಂಡುಬರುವುದು. ಜನಪರಹೋರಾಟಗಳನ್ನು ಮೊಳಕೆಯಲ್ಲಿ ಹೊಸಕಿಹಾಕಲು ರಾಯರ ಆದೇಶ. ಇದನ್ನು ಚಾಚೂತಪ್ಪದೇ ಪಾಲಿಸುತ್ತಿದೆ ರಾಯರ ಪೋಲೀಸ್ ಪಡೆ. ಬಂದೂಕು ಬಲದಿಂದ ಗುಂಡೂರಾಯರು ಎಷ್ಟು ದಿನ ಆಳಿಯಾರು?

ವರದಿ—ಬಿ. ಡಿ. ರಾಮಯ್ಯ

ಅಂಗವಿಕಲರ ಸಮ್ಮೇಳನ

ರಾಜ್ಯಮಟ್ಟದ ಅಂಗವಿಕಲರ ದ್ವಿತೀಯ ಸಮ್ಮೇಳನವು ಏಪ್ರಿಲ್ 11 ಮತ್ತು 12ರಂದು ಖ್ಯಾತ ಸಾಹಿತಿ ಶ್ರೀ ನಿರಂಜನರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆಯಿತು. ರಾಜ್ಯಮಟ್ಟದಲ್ಲಿ ಅಂಗವಿಕಲರನ್ನು ಸಂಘಟಿಸುತ್ತಿರುವ ಮಂಗಳೂರಿನ "ಕರ್ನಾಟಕ ರಾಜ್ಯ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘ"ವು ಈ ಸಮ್ಮೇಳನ ನಡೆಸಿತ್ತು. ರಾಜ್ಯದ ಎಲ್ಲೆಡೆಗಳಿಂದ ಸುಮಾರು 2000 ಅಂಗವಿಕಲರ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಏಪ್ರಿಲ್ 11ರಂದು ಬೆಳಿಗ್ಗೆ ಖಾದ್ರಿ ಶಾಮಣ್ಣ ಸಮ್ಮೇಳನ ಉದ್ಘಾಟಿಸಿದರು. ಹಾಸ್ಯ ಸಾಹಿತಿ ಎ. ಎಲ್. ಸ್ವಾಮಿ ಅವರಿಗೆ ಶಾಲು ಹೊದಿಸಿ ಗೌರವಿಸುವ ಮೂಲಕ ಉದ್ಘಾಟನೆ ಮಾಡಿದ ಶ್ರೀ ಖಾದ್ರಿ ಶಾಮಣ್ಣ ಅಂಗವಿಕಲರು ತಮ್ಮ ಹಕ್ಕುಗಳಿಗಾಗಿ ಹೋರಾಡಲು ಕರೆ ನೀಡಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಶ್ರೀ ನಿರಂಜನ ಅವರು, ಸಮಾಜದಲ್ಲಿನ ಕ್ರೌರ್ಯವನ್ನು ಎತ್ತಿ ತೋರಿಸಿ ಸಮಾಜ ಜೀವಂತವಾಗುವ ಆಶಯ ವ್ಯಕ್ತಪಡಿಸಿದರು. ದೈಹಿಕ ದೋಷದಿಂದ ಅಂಗವಿಕಲರಾಗುತ್ತಿರುವುದನ್ನು ಸಹಿಸಬಹುದಾದರೂ ಮನುಷ್ಯನ ಕ್ರೌರ್ಯದಿಂದ ಅಂಗವಿಕಲರಾಗುತ್ತಿರುವುದು ಸಹಿಸಲಾಗದು ಎಂದು ಭಾವೋದ್ವೇಗದಿಂದ ಶ್ರೀ ನಿರಂಜನ ನುಡಿದರು. ಅಂಗವಿಕಲರ ಹೆಸರಿನ ದುರುಪಯೋಗವಾಗುತ್ತಿರುವುದನ್ನು ತಿಳಿಸಿ ಜಾಗೃತರಾಗುವುದು ಅವಶ್ಯ ಎಂದರು.

ಈ ಸಮ್ಮೇಳನ ಉದ್ದೇಶಿಸಿ ಕಾಂ. ಪಿ. ರಾಮಚಂದ್ರರಾವ್, ಶ್ರೀ ವಿ. ಟಿ. ರಾಜಶೇಖರ ಶೆಟ್ಟಿ, ಶ್ರೀ ಮಲ್ಯ ಮೊದಲಾದವರು ಮಾತನಾಡಿದರು. ಮರುದಿನ (ಏ. 12) ವಿಚಾರಗೋಷ್ಠಿ ನಡೆಯಿತು. ಅನೇಕರು ಭಾಗವಹಿಸಿದ್ದರು. ಸಂಜೆ ಅಂಗವಿಕಲರ ಭಾರೀ ಮೆರವಣಿಗೆ ನಡೆಯಿತು. ನಗರದ ಚಿಕ್ಕಲಾಲ್‌ಬಾಗ್‌ನಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಶ್ರೀ ನಿರಂಜನರು ಅಧ್ಯಕ್ಷತೆ ವಹಿಸಿದ್ದರು. ವಿವಿಧ ರಾಜಕೀಯ ಪಕ್ಷಗಳ ಮುಖಂಡರಾದ ತಾರಾದೇವಿ (ಕಾಂಗ್ರೆ) ರಾಮಚಂದ್ರೇಗೌಡ (ಬಿ. ಜೆ. ಪಿ.), ಕಾಂ. ಕಕ್ಕಿಲ್ಲಾಯ (ಸಿ.ಪಿ.ಐ.), ಕಾಂ. ಎಂ. ಕೆ. ಭಟ್ [ಸಿ.ಪಿ.ಐ.(ಎಂ)] ಮೊದಲಾದವರು ಮಾತನಾಡಿದರು. ೦

ದ. ಕ. ಜಿಲ್ಲಾ ಸಮಿತಿ ಸಭೆ

ದ. ಕ. ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಭೆ ಏಪ್ರಿಲ್ 8 ಮತ್ತು 9ರಂದು ಮಂಗಳೂರಿನಲ್ಲಿ ಜರುಗಿತು. ಎಲ್ಲೈಸಿಯ 45,000 ಮೂರನೇ ಮತ್ತು ನಾಲ್ಕನೇ ದರ್ಜೆ ನೌಕರರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಲಾಯಿತು. (ಈ ಮುಷ್ಕರ ಏ 15 ರಂದು ಸುಪ್ರೀಂಕೋರ್ಟು ತೀರ್ಪಿನಿಂದಾಗಿ ನಿಲುಗಡೆಮಾಡಿದೆ.) ಕರ್ನಾಟಕ ಪ್ರಗತಿಪರ ಜನತಂತ್ರ ರಂಗದ ಕರೆಗನುಸಾರವಾಗಿ ಏ. 20 ರಂದು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ನಡೆದ ರೈತರ ಧರಣೆ ಕಾರ್ಯಕ್ರಮದಲ್ಲಿ ಜಿಲ್ಲೆಯ ರೈತರು ಕಾರ್ಮಿಕರು ಹೆಚ್ಚಿನಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಲಾಗಿತ್ತು. ನಿಪ್ಪಾಣಿಯ ತಂಬಾಕು ಬೆಳೆಗಾರರ ಮೇಲೆ ನಡೆದ ಗೋಳಿಬಾರನ್ನು ತೀವ್ರವಾಗಿ ಖಂಡಿಸಿದ ಸಭೆಯು, ರೈತರ ಬೇಡಿಕೆಗಳಿಗೆ ತನ್ನ ಹೃತ್ಪೂರ್ವಕ ಬೆಂಬಲ ವ್ಯಕ್ತಪಡಿಸಿತು. ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ವಿರೋಧ ಪಕ್ಷಗಳ ಮೇಲೆ ಆಳುವ ಪಕ್ಷದವರು ನಡೆಸುತ್ತಿರುವ ಗೂಂಡಾ ದಾಳಿಗಳನ್ನು ಸಭೆಯು ಉಗ್ರವಾಗಿ ಖಂಡಿಸಿತು. ಈ ದಾಳಿಗಳ ವಿರುದ್ಧವಾಗಿ ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಂದುಗೂಡಿ ಹೋರಾಡಬೇಕೆಂದು ಜಿಲ್ಲಾಸಮಿತಿ ಕರೆನೀಡಿದೆ. ಸುಳ್ಯ ಸರಕಾರಿ ಆಸ್ಪತ್ರೆಯಲ್ಲಿ ಭ್ರಷ್ಟಾಚಾರಿ ಡಾಕ್ಟರರ ಅಲಕ್ಷದಿಂದಾಗಿ ಇಬ್ಬರು ಹರಿಜನರು ಮೃತರಾದುದನ್ನು ಗಂಭೀರವಾಗಿ ಪರಿಗಣಿಸಿದ ಸಭೆಯು, ಭ್ರಷ್ಟಾಚಾರವನ್ನು ತೀವ್ರವಾಗಿ ಖಂಡಿಸಿತು.

೦

ವಿದೇಶಿ ನೀತಿ ಮತ್ತು ಅಲಿಪ್ತ ಚಳುವಳಿ

ಭಾರತ ಸರ್ಕಾರದ ವಿದೇಶಿ ನೀತಿಯು ಶಾಂತಿ, ಸ್ವಾತಂತ್ರ್ಯ ಮತ್ತು ಸಾಮ್ರಾಜ್ಯಶಾಹಿ ವಿರೋಧವನ್ನು ಹೇಳುವ ಅಲಿಪ್ತ ನೀತಿಯಾಗಿರುವುದರಿಂದ ಇದೊಂದು ಪ್ರಗತಿಶೀಲ ನೀತಿ ಎಂದು ನಮ್ಮ ದೇಶದ ಮತ್ತು ಕಮ್ಯುನಿಸ್ಟ್ ವಲಯಗಳೂ ಸೇರಿದ ವಿದೇಶದ ರಾಜಕಾರಣಿಗಳು ಬಣ್ಣಿಸುತ್ತಾರೆ. ಈ ಅಲಿಪ್ತ ನೀತಿಯನ್ನು ಕಂಡುಹಿಡಿದು ರೂಪಿಸಿದವರು ಜವಹರಲಾಲ್ ನೆಹರು ಎಂದೂ ಹೇಳಲಾಗುತ್ತದೆ. ಈ ವಿದೇಶಿ ನೀತಿಯನ್ನು ಬೆಂಬಲಿಸುವಂತೆ ಕಾಣುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸರ್ಕಾರದ ಆಂತರಿಕ ನೀತಿಯನ್ನು ವಿರೋಧಿಸುವುದೇಕೆ, ಆಂತರಿಕ ನೀತಿಯ ವಿಸ್ತರಣವೇ ವಿದೇಶಿ ನೀತಿಯಲ್ಲವೇ ಎಂದೂ ಕೇಳುತ್ತಾರೆ.

ಆದರೆ ಇದಕ್ಕೆ ಉತ್ತರ ಕೊಡುವ ಮೊದಲು ನಾವು ಒಂದು ಮಾತನ್ನು ಒತ್ತಿಹೇಳುತ್ತೇವೆ. ಪ್ರತಿಯೊಂದು ಅಲಿಪ್ತ ಸರ್ಕಾರದ ವಿದೇಶಿ ನೀತಿಯನ್ನೂ ಪ್ರಗತಿಶೀಲ ಎಂದು ಬಣ್ಣಿಸುವುದು ತಪ್ಪಾಗುತ್ತದೆ. ಅದರ ಆಧಾರದ ಮೇಲೆ ಆ ಸರ್ಕಾರದ ಆಂತರಿಕ ನೀತಿಯೂ ಪ್ರಗತಿಶೀಲ ಎಂದು ಹೇಳುವುದೂ ತಪ್ಪುದಾರಿಗೆಳೆಯುವ ಕೆಲಸ. ಅಲಿಪ್ತ ಚಳುವಳಿಗೆ ಸೇರಿರುವ ಅನೇಕ ದೇಶಗಳು ತಮ್ಮ ಆಂತರಿಕ ನೀತಿಗಳಲ್ಲಿ ತುಂಬ ಪ್ರತಿಗಾಮಿಯಾಗಿವೆ.

ಅಲಿಪ್ತ ಚಳುವಳಿ

ಮೇಲಿನ ಹೇಳಿಕೆಯನ್ನು ಸಮರ್ಥಿಸಲು ದೊಡ್ಡ ಮತ್ತು ಉದ್ದನೆಯ ವಾದ ಮಂಡಿಸಬೇಕಿಲ್ಲ. ಅಲಿಪ್ತ ಚಳುವಳಿಗೆ ನೂರಕ್ಕಿಂತಲೂ ಹೆಚ್ಚು ದೇಶಗಳು ಸೇರಿವೆ. ಪ್ರತಿಯೊಂದು ದೇಶವೂ ತನ್ನ ನೀತಿ ಅಲಿಪ್ತ ಮತ್ತು ಅದು ವಿಶ್ವಶಾಂತಿಗೆ ಹೋರಾಡುತ್ತದೆ ಎಂದು ಬಣ್ಣಿಸಿಕೊಳ್ಳುತ್ತವೆ. ಆದರೆ ನೂರೂ ಚಿಲ್ಲರೆ ದೇಶಗಳು ತಮ್ಮ ವಿದೇಶಿ ನೀತಿ ಅಲಿಪ್ತ ಎಂದು ಹೇಳಿಕೊಂಡರೂ ಕೂಡ ಅವುಗಳ ವರ್ಗಸ್ವರೂಪ ಮತ್ತು ರಚನೆ ಅದಕ್ಕೆ ವಿರೋಧವಾದುದು; ಇದರಲ್ಲಿ ಕೆಲವು ಸಮಾಜವಾದಿ ದೇಶಗಳು. ಮಿಕ್ಕ ಕೆಲವು ಬೂರ್ಜ್ವಾ-ಭೂಮಾಲೀಕ ದೇಶಗಳು, ಕೆಲವು ಬಂಡವಾಳಶಾಹೀಪೂರ್ವ ಸಾಮಾಜಿಕ ಸಂಬಂಧಗಳನ್ನೇ ಪ್ರಮುಖವಾಗಿ ಉಳ್ಳಂಥವು. ಮಿಕ್ಕ ಕೆಲವು ದೇಶಗಳಲ್ಲಿ ಒಂದು ರೀತಿಯ ಬೂರ್ಜ್ವಾ-ಪ್ರಜಾಪ್ರಭುತ್ವವಾದಿ ವ್ಯವಸ್ಥೆ ಇದ್ದರೆ, ಕೆಲವು ದೇಶಗಳಲ್ಲಿ ಸರ್ವಾಧಿಕಾರಿ ಆಡಳಿತ ಇದ್ದು, ಅವು ನೇರವಾಗಿ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ.

ದೇಶಗಳ ವರ್ಗಸ್ವಭಾವ ಈ ರೀತಿ ಇದ್ದಾಗ ಒಂದು ದೇಶದ ವಿದೇಶಿ ನೀತಿಯೊಡನೆ ಇನ್ನೊಂದನ್ನು ಸಮೀಕರಿಸುವುದಾಗಲಿ ಅಥವಾ ಎಲ್ಲ ಅಲಿಪ್ತ ದೇಶಗಳ ವಿದೇಶಿ ನೀತಿಯು ಪ್ರಗತಿಶೀಲ ಎಂದು ಒಟ್ಟಾರೆ ಹೇಳುವುದಾಗಲಿ ತಪ್ಪಾಗುತ್ತದೆ. ಇದಲ್ಲದೆ ಅಲಿಪ್ತ ನೀತಿ ಇರುವುದರಿಂದ ಆ ದೇಶದ ಆಂತರಿಕ ಮತ್ತು ವಿದೇಶಿ ನೀತಿಗಳು ಪ್ರಗತಿಶೀಲ ಎಂದು ಭಾವಿಸಿ ಅದಕ್ಕೆ ಕ್ರಾಂತಿಕಾರಿ ಶಕ್ತಿಗಳು ಮತ್ತು ಜಗತ್ತಿನ ಸಮಾಜವಾದಿ ದೇಶಗಳು ಇದಕ್ಕೆ ಬೆಂಬಲ ಕೊಡಬೇಕು ಎಂದು.

ಮೂಲಭೂತ ದೃಷ್ಟಿಕೋನ

ಭಾರತ ದೇಶ ಮತ್ತು ಸರ್ಕಾರದ ವಿದೇಶಿ ಮತ್ತು ಆಂತರಿಕ ನೀತಿಯನ್ನು ಪರೀಕ್ಷಿಸಿ ವಿಶ್ಲೇಷಿಸುವಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ವರ್ಗ ದೃಷ್ಟಿಕೋನವನ್ನು ಅನುಸರಿಸುತ್ತದೆ. ದೇಶ ಮತ್ತು ಸರ್ಕಾರವು ಯಾವ ವರ್ಗ ಅಥವಾ ವರ್ಗಗಳನ್ನು ಪ್ರತಿನಿಧಿಸುತ್ತದೆ ಎಂದು ಪರಿಶೀಲಿಸುತ್ತದೆ. ವರ್ಗಾತೀತವಾದ ದೇಶ ಅಥವಾ ಸರ್ಕಾರ ಇರುವುದಿಲ್ಲ. ಅಲಿಪ್ತ ನೀತಿಯು ಕೂಡ ವರ್ಗಗಳ ಅಥವಾ ದೇಶಗಳ ಹಿತಾಸಕ್ತಿಗಳಿಂದ ರೂಪುಗೊಳ್ಳುತ್ತದೆ. ಆದ್ದರಿಂದ ಅಲಿಪ್ತ ನೀತಿಯ ಪರಿಶೀಲನೆಯಲ್ಲಿ ವರ್ಗ ದೃಷ್ಟಿಕೋನವನ್ನು ಕೈಬಿಡುವುದು ಮಾರ್ಕ್ಸ್‌ವಾದವಿರೋಧಿ ಮತ್ತು ಅವೈಜ್ಞಾನಿಕ ಕೆಲಸವಾಗುತ್ತದೆ. ವಿವಿಧ ದೇಶಗಳ ಅಲಿಪ್ತನೀತಿ ಒಂದೇ ಮಟ್ಟದಲ್ಲಿ ಉಳಿದುಕೊಂಡು ಬಂದಿಲ್ಲ. ಸಾಮ್ರಾಜ್ಯಶಾಹಿ ವಿರೋಧಿ ನೀತಿಯನ್ನು ಅವು ಅನುಸರಿಸಿದ್ದರೂ ಎಲ್ಲಾ ಸಮಯಗಳಲ್ಲೂ ಅದನ್ನು ಉಳಿಸಿಕೊಂಡಿಲ್ಲ.

ವರ್ಗಸ್ವರೂಪ

ಭಾರತವು ಒಂದು ಬೂರ್ಜ್ವಾ-ಭೂಮಾಲೀಕ ದೇಶವೆಂಬ ವಿವರಣೆ ಈಗ ಸ್ಪಷ್ಟವಾಗಿ ಮೂಡಿದೆ. ಭಾರತವು ತನ್ನನ್ನು ತಾನು ಕಟ್ಟಿಕೊಳ್ಳಲು ಸಮಾಜವಾದಿ ಮತ್ತು ಸಾಮ್ರಾಜ್ಯಶಾಹಿ ನೆರವನ್ನು ತೆಗೆದುಕೊಳ್ಳದೆ ಇಲ್ಲ. ನಮ್ಮ ಈ ತಿಳುವಳಿಕೆ ಸರಿಯಾಗಿರುವುದನ್ನು ಅನುಭವ ಸಮರ್ಥಿಸಿದೆ.

ರಾಮರಾಜ್ಯ ಕಟ್ಟುತ್ತೇವೆ, ಸಮಾಜವಾದಿ ಪಥಕ್ಕೆ ದೇಶವನ್ನು ಕೊಂಡೊಯ್ಯುತ್ತೇವೆ ಎಂದು ಭಾರತದ ಆಳುವ ವರ್ಗಗಳು ಹೇಳಿಕೊಂಡರೂ ಅವು ಬೂರ್ಜ್ವಾ - ಭೂಮಾಲೀಕ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡುತ್ತಾ ಬಂಡವಾಳಶಾಹಿ ಬೆಳವಣಿಗೆಯ ದಾರಿಯನ್ನು ಅನುಸರಿಸುತ್ತಿವೆ ಎಂಬುದು ಇರುವ ಸತ್ಯ.

ದೇಶದ ಕೈಗಾರಿಕಾ ಮತ್ತು ಇತರ ಆಸ್ತಿಗಳ ಸಿಂಹಪಾಲು 25 ದೊಡ್ಡ ಕುಟುಂಬಗಳಲ್ಲಿ ಸೇರಿಹೋಗಿರುವುದು, ಬಹುರಾಷ್ಟ್ರೀಯ ಕಂಪೆನಿಗಳ ಸಹಕಾರಿ ಒಪ್ಪಂದಗಳಿಗೆ ವಿವೇಚನೆಯಿಲ್ಲದೆ ಸಹಿಹಾಕುತ್ತಿರುವುದು, ಅನ್ಯಾಯಕಾರಿ ಭೂಸಂಧಾರಣೆಗಳು, ಕೃಷಿಕಾರ್ಮಿಕರ ದಿವಾಳಿ, ಶೇ. 50ಕ್ಕಿಂತಲೂ ಹೆಚ್ಚು ಜನ ದಾರಿದ್ರ್ಯರೇಖೆಯ ಕೆಳಗಿರುವುದು, ಇವೆಲ್ಲವೂ ಭಾರತ ದೇಶ ಮತ್ತು ಸರ್ಕಾರದ ವರ್ಗಸ್ವರೂಪ ಯಾವುದು ಎಂಬುದರ ಬಗ್ಗೆ ರಾಶಿ ಗಟ್ಟಲೆ ಹೇಳುತ್ತವೆ. ಇಂಥ ನೀತಿಯನ್ನು ಪ್ರಗತಿಶೀಲ ಎಂದು ಊಹೆಯ ಮೇಲೆ ಕೂಡ ಹೇಳುವಂತಿಲ್ಲ.

ಈ ಸಂದರ್ಭದಲ್ಲಿ, ಸರ್ಕಾರವು 1975ರಲ್ಲಿ ಆಂತರಿಕ ತುರ್ತುಪರಿಸ್ಥಿತಿಯನ್ನು ಹೇರಿದಾಗ, ಅನೇಕ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು, ಅನೇಕ ಸಮಾಜವಾದಿ ದೇಶಗಳ ಆಳುವ ಪಕ್ಷಗಳು ಬೆಂಬಲ ಕೊಟ್ಟದ್ದರ ಬಗ್ಗೆ ಹೇಳಬಹುದು. ಇದು, ಸರ್ಕಾರದ ಅಲಿಪ್ತ ವಿದೇಶಿ ನೀತಿಗೆ ಕೊಟ್ಟ ಬೆಂಬಲ ಅಲ್ಲ. ಭಾರತ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ಮತ್ತು ದಮನಕಾರಿ ಆಂತರಿಕನೀತಿಗೆ ಕೊಟ್ಟ ರಕ್ಷಣೆ. ಇದು ಭಾರತ ಸರ್ಕಾರ ಮಾತ್ರವಲ್ಲ ಪಾಕಿಸ್ತಾನದಂಥ ದೇಶಗಳ ಬಗ್ಗೆಯೂ ನಡೆದಿದೆ.

ಅಲಿಪ್ತ ವಿದೇಶಿ ನೀತಿಯು ಪ್ರಗತಿಶೀಲವಾದದ್ದು ಮತ್ತು ಅದರಂತೆ, ಆಂತರಿಕ ನೀತಿಯೂ ಪ್ರಗತಿಶೀಲವಾದದ್ದು ಎಂಬ ತಪ್ಪು ಪರಿಕಲ್ಪನೆಯಿಂದ ಈ ರೀತಿ ಆಗುತ್ತದೆ. ನಮ್ಮ ಟೀಕೆ ಏನೆಂದರೆ ಆ ಆಳುವ ಕಮ್ಯುನಿಸ್ಟ್ ಪಕ್ಷಗಳು, ತಮ್ಮ ವಿದೇಶಿನೀತಿಯ ತತ್‌ಕ್ಷಣದ ಮತ್ತು ಅವಕಾಶವಾದಿ ಅಗತ್ಯಗಳಿಗಾಗಿ ಹೊಸದಾಗಿ ಸ್ವಾತಂತ್ರ್ಯ ಪಡೆದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಕ್ರಾಂತಿಕಾರಿ ಶಕ್ತಿಗಳ ಬೆಳವಣಿಗೆಯ ಬಗ್ಗೆ ಗಮನವನ್ನು ಕೈಬಿಟ್ಟಿದ್ದಾರೆ ಎಂಬುದು. ಇದರಿಂದ ದುಡಿಮೆಗಾರ ವರ್ಗದ ಹೋರಾಟ ಮತ್ತು ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ವಿಪರೀತ ಹಾನಿಯುಂಟಾಗಿದೆ.

ಎಂ. ಬಸವಪುನ್ನಯ್ಯ

ಇದರ ಅರ್ಥ, ಆಳುವ ಕಮ್ಯುನಿಸ್ಟ್ ಪಕ್ಷಗಳು ಮತ್ತು ಕಾರ್ಮಿಕ ಪಕ್ಷಗಳು, ಹೊಸದಾಗಿ ಸ್ವತಂತ್ರವಾದ ದೇಶಗಳು ಮತ್ತು ಸರ್ಕಾರದ ಆಂತರಿಕ ನೀತಿಗಳು ಜನವಿರೋಧಿ ಮತ್ತು ಪ್ರತಿಗಾಮಿಯಾಗಿದೆ ಎಂಬುದರ ಆಧಾರದ ಮೇಲೆ ಅವುಗಳ ಅಲಿಪ್ತ ವಿದೇಶಿ ನೀತಿಯನ್ನು ವಿರೋಧಿಸಬೇಕು ಎಂದೇನೂ ಅಲ್ಲ. ಆದರೆ ಹೊಸದಾಗಿ ಸ್ವತಂತ್ರವಾದ ದೇಶಗಳಲ್ಲಿ ಕೆಲಸಮಾಡುತ್ತಿರುವ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು, ತಮ್ಮ ಸರ್ಕಾರದ ವಿದೇಶಿ ನೀತಿಯು ಪ್ರಗತಿಶೀಲವಾಗಿರುವುದರಿಂದ ಅವುಗಳ ಆಂತರಿಕ ನೀತಿಗಳು ಎಷ್ಟೇ ಜನಾಸತ್ತಾತ್ಮಕವಲ್ಲದಿದ್ದರೂ ಬೆಂಬಲಿಸಬೇಕು ಎಂದು ಕೇಳುವುದು ಎಷ್ಟು ದೊಡ್ಡ ತಪ್ಪು ಎಂಬುದನ್ನು ಇಲ್ಲಿ ಸೂಚಿಸಲು ಮಾತ್ರ ಇವನ್ನೆಲ್ಲ ಹೇಳುತ್ತಿದ್ದೇನೆ.

ಸಮಾಜವಾದಿ ದೇಶಗಳಿಂದ ಆರ್ಥಿಕ ಸಹಾಯ ಮತ್ತು ರಾಜಕೀಯ ಬೆಂಬಲವನ್ನು ಪಡೆಯಲು ಹಿಂಜರಿಯದ ಅಲಿಪ್ತ ದೇಶಗಳು ಮತ್ತು ಸರ್ಕಾರಗಳು, ತಮ್ಮ ಕಾರ್ಮಿಕವರ್ಗವನ್ನು ದಮನಮಾಡಲು, ಕಮ್ಯುನಿಸ್ಟರನ್ನು ನೂರಾರುಗಟ್ಟಲೆ ಕೊಲೆಮಾಡಲು, ಸಮಾಜವಾದಿ ವಿರೋಧಿ ಮತ್ತು ಸೋವಿಯೆತ್ ವಿರೋಧಿ ಪ್ರಚಾರವನ್ನು ಮಾಡಲು ಹಿಂಜರಿಯುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸುವ ಅಗತ್ಯವಿದೆ. ಸಮಾಜವಾದಿ ದೇಶಗಳು ಕೂಡ, ಈ ಅಲಿಪ್ತ ದೇಶಗಳ ಕಾರ್ಮಿಕರ, ರೈತರ, ಜನರ ದುಸ್ಥಿತಿಯ ಚಿತ್ರಣವನ್ನು ಅವರ ಮುಂದೆ ಇಡಲು ಹಿಂಜರಿಯುತ್ತಿವೆ. ಇದಕ್ಕೆ ಕಾರಣ, ಅಲಿಪ್ತ ದೇಶಗಳ ಭಾವನೆಯನ್ನು ಗಾಯಗೊಳಿಸಲು ಇಷ್ಟವಿಲ್ಲದಿರುವುದು ಅಥವಾ ಪ್ರಾಥಮಿಕ ಕಾರ್ಮಿಕ ಅಂತರರಾಷ್ಟ್ರೀಯ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ವಿಫಲವಾಗಿರುವುದು.

ಆರ್ಥಿಕ ಪರಿಸ್ಥಿತಿಯೇ ರಾಜಕೀಯ ನ್ಯಾಯಾಂಗ, ತಾತ್ವಿಕ, ಧಾರ್ಮಿಕ, ಸಾಹಿತ್ಯಕ ಮತ್ತು ಕಲಾತ್ಮಕ ಬೆಳವಣಿಗೆಯ ತಳಹದಿ ಎಂಬಂಥ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಹೇಳಿಕೆಗಳನ್ನು ವಿರೂಪಗೊಳಿಸುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಉಗ್ರವಾಗಿ ವಿರೋಧಿಸುತ್ತದೆ. ಆ ಹೇಳಿಕೆಯನ್ನು ಎಂಗೆಲ್ಸ್ ಸ್ಪಷ್ಟಪಡಿಸಿದ್ದಾನೆ.

ಭಾರತ ಸರ್ಕಾರದ ಆಂತರಿಕ ಮತ್ತು ವಿದೇಶಿನೀತಿಯ ಬೇರು ಕೆಲವು ವರ್ಗಹಿತಾಸಕ್ತಿಗಳಲ್ಲಿ ಎಂದರೆ, ಬೂರ್ಜ್ವಾ-ಭೂಮಾಲೀಕ ವರ್ಗಗಳ ಹಿತಾಸಕ್ತಿ ಮತ್ತು ಬಂಡವಾಳಶಾಹಿ ಅಭಿವೃದ್ಧಿದಾರಿಯಲ್ಲಿ ಇದೆ. ಅಲಿಪ್ತ ನೀತಿಯಲ್ಲಿ ಸಹ ಅವಕಾಶವಾದಿ ಹೊರಳುಗಳು ಇವೆ.

ಜಗತ್ತಿನ ಸಾಮ್ರಾಜ್ಯಶಾಹಿ ಶಕ್ತಿಗಳು ಅಲಿಪ್ತನೀತಿಗೆ ಮೊದಲು ವಿರೋಧವನ್ನು ವ್ಯಕ್ತಪಡಿಸಿ, ಹೊಸ ಸ್ವತಂತ್ರ ದೇಶಗಳು ಸೀಟೋ, ಸೆಂಟೋ, ಅಂಜಸ್‌ಗಳಿಗೆ ಸೇರುವಂತೆ ಒತ್ತಡ ತರುತ್ತಿದ್ದವು. ಅವು ಈಗ ತಂತ್ರವನ್ನು ಬದಲಾಯಿಸಿವೆ. ಈಗ ಅಲಿಪ್ತ ಚಳುವಳಿಯೊಳಗೆ ಅದು ತಮ್ಮ ಅವಲಂಬಿತ ದೇಶಗಳನ್ನು ಮೆಲ್ಲನೆ ತೂರಿಸುತ್ತಿವೆ.

ಸರ್ಕಾರದ ವಿದೇಶಿ ನೀತಿಯು ಅಲಿಪ್ತವಾಗಿದೆ ಎಂದ ಮಾತ್ರಕ್ಕೆ ಯಾವ ಕಮ್ಯುನಿಸ್ಟ್ ಪಕ್ಷವೂ ಅದರ ಆಂತರಿಕ ವರ್ಗನೀತಿಗಳನ್ನು ಬೆಂಬಲಿಸಬೇಕಾಗುವುದಿಲ್ಲ. ನಮ್ಮ ಪಕ್ಷವು ಸರ್ಕಾರದ ಮೂಲಭೂತ ವರ್ಗನೀತಿಗಳನ್ನು ವಿರೋಧಿಸುವುದೇಕೆಂದರೆ, ಮೊದಲನೆಯದಾಗಿ ಅದು ಬೂರ್ಜ್ವಾ ರೀತಿಯದು, ಎರಡನೆಯದಾಗಿ ಅದು ಬಂಡವಾಳಶಾಹಿಯನ್ನು ಕಟ್ಟಲು ಯತ್ನಿಸುತ್ತಿದೆ, ಮೂರನೆಯದಾಗಿ ಅದು ವಿದೇಶಿ ಏಕಸ್ವಾಮ್ಯದ ಸಹಕಾರದೊಡನೆ ಬಂಡವಾಳಶಾಹಿ ಕೈಗಾರಿಕೀಕರಣವನ್ನು ಮಾಡುತ್ತಿದೆ.

ಇದರ ಬದಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಭೂಮಾಲೀಕತ್ವದ ನಿರ್ನಾಮ, ವಿದೇಶಿ ಬಂಡವಾಳದ ಮುಟ್ಟುಗೋಲು ಮತ್ತು ಭಾರತೀಯ ಗುತ್ತೇದಾರಿ ಉದ್ಯಮಗಳ ರಾಷ್ಟ್ರೀಕರಣ ಇವುಗಳನ್ನು ಹೇಳುತ್ತಿದೆ. ಭಾರತ ಸರ್ಕಾರದ ನೀತಿಗಳು ದೊಡ್ಡ ಬೂರ್ಜ್ವಾವರ್ಗದ ಹಿತಾಸಕ್ತಿಗಳನ್ನು ಕಾಪಾಡುವುದರಿಂದ ನಾವು ಅದನ್ನು "ಪ್ರಗತಿಶೀಲ" ಎಂದು ಬಣ್ಣಿಸುವುದರ ಪ್ರಶ್ನೆಯೇ ಏಳುವುದಿಲ್ಲ. ಭಾರತದಲ್ಲಿ ಬಂಡವಾಳಶಾಹಿಯನ್ನು ಬೆಳೆಸಲು ಉದ್ದೇಶಿಸುವ ಎಲ್ಲ ಆಂತರಿಕ ಮತ್ತು ವಿದೇಶಿ ನೀತಿಯನ್ನೂ ನಮ್ಮ ಪಕ್ಷ ವಿರೋಧಿಸುತ್ತದೆ.

○

ಎಸ್. ವೆಂಕಟರಾವ್ ಸ್ಮರಣ ಸಭೆ

ಚಿಂತನಪರ ಸಮಾಜವಾದಿ, ಕಾರ್ಮಿಕನಾಯಕ ದಿ॥ ಎಸ್. ವೆಂಕಟರಾವ್ ಸ್ಮರಣ ಸಭೆ ಬೆಂಗಳೂರಿನಲ್ಲಿ ಏ. 12, 1981ರಂದು ನಡೆಯಿತು. (ಕಾಂ. ಎಸ್. ವೆಂಕಟರಾವ್ ಇದೇ ವರ್ಷ ಜ. 20ರಂದು ನಿಧನರಾಗಿದ್ದರು) ವಿವಿಧ ರಾಜಕೀಯ ಪಕ್ಷಗಳ ಮುಖಂಡರು ದಿ॥ ಎಸ್. ವೆಂಕಟರಾವರ ಆತ್ಮೀಯರು ಮಾತನಾಡಿದರು. ಖಾದ್ರಿಶಾಮಣ್ಣನವರು ಅಧ್ಯಕ್ಷತೆ ವಹಿಸಿದ್ದರು.

●

ಲಿಪಿಕ ನೌಕರರ ಸಂಘದ ಸಭೆ

8-4-81ರಂದು ಬೆಂಗಳೂರು ಕಬ್ಬನ್‌ಪಾರ್ಕಿನಲ್ಲಿರುವ "ಸರ್ಕಾರಿ ನೌಕರರ ಭವನ"ದಲ್ಲಿ ಸರ್ಕಾರಿ ಲಿಪಿಕ ನೌಕರರ ಸಂಘ (Karnataka Govt Ministerial Employees' Association)ದ ಸಭೆ ನಡೆಯಿತು. ಸಂಘದ ಈ ತನಕದ ಕಾರ್ಯಚಟುವಟಿಕೆಗಳನ್ನು ವಿವರಿಸಲು, ಲಿಪಿಕ ನೌಕರರ ಮಧ್ಯೆ ನೇರ ಸಂಪರ್ಕ ಹಾಗೂ ಸಮನ್ವಯತೆಯನ್ನು ಬೆಳೆಸುವ ದೃಷ್ಟಿಯಿಂದ ಈ ಸಭೆಯನ್ನು ಏರ್ಪಡಿಸಲಾಗಿತ್ತು.

○

ಈ ದುರಂತ ಪಾಕೀಸ್ತಾನಕ್ಕಷ್ಟೇ ಸೀಮಿತವೆ ?

1980 ಜನವರಿ ತಿಂಗಳು 17ನೇ ತಾರೀಖಿನಂದು ಪಾಕೀಸ್ತಾನದ ಮಿಲಿಟರಿ ಸರ್ವಾಧಿಕಾರಿ ಜನರಲ್-ಜಿಯಾ ಉಲ್-ಹಕ್ ಅವರು ಅಮೇರಿಕಾದ ಕೆಲವು ಪತ್ರಕರ್ತರೊಂದಿಗೆ ಮಾತನಾಡುತ್ತಾ, "ದಯವಿಟ್ಟು ನೀವು ಪಾಕೀಸ್ತಾನವನ್ನು ಅಮೇರಿಕಾದ ಕಣ್ಣುಗಳಿಂದ ನೋಡಬೇಡಿ; ಏಕೆಂದರೆ ಇಲ್ಲಿ 100ಕ್ಕೆ 75ಜನರು ಅವಿದ್ಯಾವಂತರು. ಅವರಿಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ನಿರ್ಧರಿಸುವಷ್ಟು ಚೈತನ್ಯವಿಲ್ಲ. ಆದ್ದರಿಂದ ಅವರಿಗೆ ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಹೇಳುವವರೊಬ್ಬರು ಅಗತ್ಯವಾಗಿ ಬೇಕಾಗಿದ್ದಾರೆ". ಇದೇ ರೀತಿಯಲ್ಲಿ 1980 ಅಕ್ಟೋಬರ್ 22ರಂದು ಜನರಲ್ ಜಿಯಾ ಅವರು ಪಾಕೀಸ್ತಾನದ ಜನತೆಯನ್ನು ಉದ್ದೇಶಿಸಿ ಮಾತನಾಡುತ್ತಾ, "ಇಸ್ಲಾಂ ಧರ್ಮದ ಪ್ರಕಾರ ಅದರ ಎಲ್ಲಾ ಕಾನೂನುಗಳನ್ನು ಜನರ ಜೀವನದ ಪ್ರತಿಯೊಂದು ಹಂತದಲ್ಲೂ ಜಾರಿಯಾಗುವವರೆಗೂ ಅದರ ನಮ್ರ ಸೇವಕನಾಗಿ ಮತ್ತು ಅದನ್ನು ಜಾರಿಗೊಳಿಸುವವರೆಗೂ ನಾನು ಅಧಿಕಾರದಲ್ಲಿರುತ್ತೇನೆ" ಎಂದು ಸಾರಿದರು. ಇಂತಹ ಸರ್ವಾಧಿಕಾರಿಯ ಕೈಯಲ್ಲಿ ಒಂದು ದೇಶದ ಭವಿಷ್ಯ ಹೇಗೆ ಇರುತ್ತದೆ ಎಂಬುದನ್ನು ಊಹಿಸಬಹುದು.

ಸಾಮ್ರಾಜ್ಯಶಾಹಿಗಳ ಕುತಂತ್ರದಿಂದಾಗಿ ಭಾರತದಿಂದ ಪ್ರತ್ಯೇಕವಾದ ಪಾಕೀಸ್ತಾನ ಏಷಿಯಾ ಉಪಖಂಡದಲ್ಲಿ ಒಂದು ದುರಂತ ರಾಷ್ಟ್ರವಾಗಿದೆ. ಅಷ್ಟೇ ಅಲ್ಲ ಉಪಖಂಡದ ಶಾಂತಿಯನ್ನು ಸದಾ ಕದಡುತ್ತಾ ಬಂದಿದೆ. ಈಗ ಉಪಖಂಡದ ಶಾಂತಿಯನ್ನು ಕದಡುವ ಪರಮಾವಧಿಯನ್ನು ಮುಟ್ಟಿದೆ ಮತ್ತು ಅದರ ಅಕ್ಕಪಕ್ಕದ ರಾಷ್ಟ್ರಗಳಿಗೆ ದೊಡ್ಡ ತಲೆನೋವಾಗಿದೆ. ಈ ದುರಂತ ಈಗಲೂ ಈ ಉಪಖಂಡದ ಅನೇಕ ರಾಷ್ಟ್ರಗಳನ್ನು ಆವರಿಸಿದೆ ಎಂದರೂ ತಪ್ಪಾಗಲಾರದು. 1947ರಿಂದೀಚೆಗೆ ಭಾರತ, ಪಾಕೀಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕಾಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪ್ರಜಾಪ್ರಭುತ್ವದ ಹರಣ ನಡೆದಿದೆ ಮತ್ತು ನಾಗರೀಕ ಹಕ್ಕುಗಳ ಮರ್ಧನವಾಗಿದೆ. ಇನ್ನು ಮುಂದೆ ಮರ್ಧನವಾಗುವ ಸೂಚನೆಯು ಕಂಡು ಬರುತ್ತಿದೆ. ಸುಮಾರು 1954ರಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಸರ್ವಾಧಿಕಾರವನ್ನು ಅನುಭವಿಸುತ್ತಾ ಬಂದಿರುವ ಪಾಕೀಸ್ತಾನದ ಜನತೆಯು ಸರ್ವಾಧಿಕಾರದ ಕ್ರೂರತನದ ಪರಮಾವಧಿಯನ್ನು 1981ರ ಮಾರ್ಚ್ ತಿಂಗಳು 24ರಂದು ಕಂಡರು. ಪಾಕೀಸ್ತಾನದ ಜನತೆಯು ಇಂದು ಉಸಿರು ಕಟ್ಟುವ ವಾತಾವರಣದಲ್ಲಿ ಜೀವಿಸುತ್ತಿದ್ದಾರೆ. ಅದಕ್ಕೆ ಒಂದು ಉದಾಹರಣೆಯೆಂದರೆ ಮೋಟಾರ್ ಸೈಕಲ್ ಅಥವಾ ಪೆಟ್ರೋಲಿನ ಯಾವುದೇ ದ್ವಿಚಕ್ರವಾಹನದ ಮೇಲೆ ಸವಾರಿ ಮಾಡಿದವರಿಗೆ 100 ಛಡಿ ಏಟುಗಳ ಶಿಕ್ಷೆ! ಎಂತಹ ಬರ್ಬರ ಕೃತ್ಯ? ಅಷ್ಟೇ ಅಲ್ಲ ಯಾವ ಸ್ತ್ರೀಯೂ ಆಟಪಾಠಗಳಲ್ಲಿ ಪಾಲ್ಗೊಳ್ಳಬಾರದು ಮತ್ತು ನೋಡಬಾರದು.

ಹಿಂದಿನ ಇರಾನನ್ನು ಬಿಟ್ಟರೆ ಪಾಕ್ ಜನತೆ ಪ್ರಪಂಚದಲ್ಲೇ ಅತೀ ಅಮಾನವೀಯ ಆಡಳಿತಕ್ಕೆ ಒಳಗಾಗಿದ್ದಾರೆ. ಅಲ್ಲಿ ಯಾವುದೇ ರೀತಿಯಾದ ಮೂಲಭೂತ ಹಕ್ಕುಗಳಿಲ್ಲ. ನ್ಯಾಯಾಲಯುಗಳು ಯಾವುದೇ ರೀತಿಯಾದಂಥ ಹೇಬಿಯಸ್ ಕಾರ್ಪಸ್‌ನಂತ ರಿಟ್ ಅರ್ಜಿಗಳನ್ನು ಸ್ವೀಕರಿಸುವ ಹಾಗಿಲ್ಲ ಯಾವುದೇ ರೀತಿಯಾದ ರಾಜಕೀಯ ಚಟುವಟಿಕೆಗಳಲ್ಲಿ ಜನರು ಪಾಲ್ಗೊಳ್ಳುವ ಹಾಗಿಲ್ಲ. ಪತ್ರಿಕಾ ಸ್ವಾತಂತ್ರದ ಸಂಪೂರ್ಣ ಹರಣ ನಡೆದಿದೆ. ಪ್ರಜಾಪ್ರಭುತ್ವದ ಮಾರಣ ಹೋಮ ನಡೆದಿದೆ. ಒಂದೆರಡು ರಾಜಕೀಯ ಪಕ್ಷಗಳನ್ನು ಬಿಟ್ಟರೆ (ಜಿಯಾ ಅವರ ತತ್ವವನ್ನು ಒಪ್ಪುವ) ಉಳಿದ ಎಲ್ಲಾ ಪಕ್ಷಗಳನ್ನು ನಿಷೇಧಿಸಲಾಗಿದೆ. ಅವುಗಳ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಲಾಗಿದೆ. ಅವುಗಳ ನಾಯಕರನ್ನು ಸೆರೆವಾಸಕ್ಕೆ ತಳ್ಳಲಾಗಿದೆ ಅವರು ಯಾವ ಜೈಲಿನಲ್ಲಿ ಇದ್ದಾರೆಂದು ಯಾರಿಗೂ ತಿಳಿಯದು ಜೈಲಿನಲ್ಲಿ ಇರುವ ರಾಜಕೀಯ ಕೈದಿಗಳ ಮೇಲೆ ಅಮಾನವೀಯ ಹಿಂಸಾಕಾಂಡ, ಲಕ್ಷಾಂತರ ಜನ ನಿರಪರಾಧಿಗಳು ಮತ್ತು ಪ್ರಜಾಪ್ರಭುತ್ವವಾದಿಗಳು ಸುಮಾರು ವರ್ಷಗಳಿಂದ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಇಂತಹ ಹಿನ್ನೆಲೆಯಲ್ಲಿ ವಿಶ್ವದ ಶಾಂತಿದೂತರೆಂದು ಹೇಳಿಕೊಳ್ಳುವ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಹೇರಳವಾಗಿ ಶಸ್ತ್ರಾಸ್ತ್ರಗಳನ್ನು ಪಾಕೀಸ್ತಾನಕ್ಕೆ ಸರಬರಾಜು ಮಾಡುತ್ತಿದ್ದಾರೆ. ಅದು ಸರಿ ಎಂದು, ಅದು ಅವರ ಹಕ್ಕೆಂದು ಅದರ ಬಾಲಬಡುಕರು ಶಂಖ ಹೊಡೆಯುತ್ತಿದ್ದಾರೆ. ಪ್ರಪಂಚದ ಜನತೆಯ ಪ್ರಥಮ ಶತ್ರುವಾಗಿ ಕೋಟ್ಯಾಂತರ ಜನ ಪ್ರಜಾಪ್ರಭುತ್ವವಾದಿಗಳನ್ನು ಬಲಿ ತೆಗೆದುಕೊಂಡಿರುವ ಕ್ರೂರಿಗಳನ್ನು ವಿಶ್ವಶಾಂತಿರಕ್ಷಕರೆಂದು ಹೇಳುವ ಜನರು ಈ ಜಗತ್ತಿನಲ್ಲಿ ಇದ್ದಾರೆಂದರೆ ಇದಕ್ಕಿಂತ ನಾಚಿಕೆಗೇಡಿನ ಕೆಲಸ ಬೇರೆ ಯಾವುದು ?

ಪಾಕೀಸ್ತಾನವು ಉದಯವಾದಾಗಿನಿಂದಲೂ ಅದರ ಆಳುವ ವರ್ಗಗಳು ಅನುಸರಿಸಿಕೊಂಡು ಬಂದಿರುವ ಆರ್ಥಿಕ ಮತ್ತು ರಾಜಕೀಯ ನೀತಿಗಳಿಂದಾಗಿ ಇಂದು ಆದೇಶವು ತೀವ್ರ ರೀತಿಯ ಆರ್ಥಿಕ ಮುಗ್ಗಟ್ಟು ಮತ್ತು ಸಾಮಾಜಿಕ ಅರಾಜಕತೆಯನ್ನು ಎದುರಿಸುತ್ತಿದೆ. ಇದರಿಂದಾಗಿ ಅಲ್ಲಿನ ಜನತೆ ಕಂಗಾಲಾಗಿ ಸಮಸ್ಯೆಗಳ ವಿರುದ್ಧ ಹೋರಾಡಲು ಅವಕಾಶವಿಲ್ಲದೆ ತ್ರಿಶಂಕುಸ್ವರ್ಗದಲ್ಲಿ ನೇತಾಡುತ್ತಿದ್ದಾರೆ.

ಭುಟ್ಟೋರವರನ್ನು ರಾಜಕೀಯವಾಗಿ ಕೊಲೆ ಮಾಡಿದ ಮೇಲೆ ಜಿಯಾ ಉಲ್ ಹಕ್ ಅವರ ಪಾಶವೀಕೃತ್ಯಗಳಿಗೆ ಎಲ್ಲೆ ಇಲ್ಲದಂತೆ ಆಗಿದೆ. ಎಲ್ಲಾ ರೀತಿಯ ನಾಗರೀಕ ಹಕ್ಕುಗಳನ್ನು ಮರ್ಧನ ಮಾಡಲಾಗಿದೆ. ಚುನಾವಣೆಗಳನ್ನು ನಡೆಸುತ್ತೇನೆಂದು ಅನೇಕ ಸಲ ಆಶ್ವಾಸನೆಗಳನ್ನು ನೀಡಿದ್ದೇ ಅಲ್ಲದೆ ದಿನಾಂಕಗಳನ್ನು ಕೂಡ ಗೊತ್ತುಮಾಡಲಾಗಿತ್ತು. ಆದರೆ ಎಲ್ಲಾ ಸರ್ವಾಧಿಕಾರಿಗಳಂತೆ ಅವರು ತನ್ನ ಆಶ್ವಾಸನೆಯನ್ನು ತಾವೇ ಮುರಿದರು. ಈಗ ಚುನಾವಣೆ ಎಂಬ ಮಾತನ್ನು ಸಮಾಧಿ ಮಾಡಲಾಗಿದೆ. ಇದಕ್ಕಿಂತ ಮುಖ್ಯವಾಗಿ ಇವನು ಮಾಡಿದ ಇನ್ನೊಂದು ಘೋರ ಅಪರಾಧವೆಂದರೆ ವಿಭಿನ್ನ ಭಾವನೆಗಳು ಇರುವ ಬೇರೆಬೇರೆ ರಾಷ್ಟ್ರೀಯಂತೆಗಳ ಭಾವನೆಗಳನ್ನು ಮರ್ಧನ ಮಾಡಿರುವುದು. ಅದರಲ್ಲೂ ಮುಖ್ಯವಾಗಿ ಪಂಜಾಬೇತರರನ್ನು. ಇದರ ವಿರುದ್ಧ ಉತ್ತರ ಮತ್ತು ಪಶ್ಚಿಮ ಅಂಚಿನಲ್ಲಿ ಇರುವ ಪಾಕೀಸ್ತಾನೀಯರು ಜಿಯಾ ಅವರ ವಿರುದ್ಧ ದಂಗೆ ಎದ್ದಿದ್ದಾರೆ. ಇದರಿಂದ ಕುಪಿತಗೊಂಡ ಜಿಯಾ ಎಲ್ಲಾ ದಬ್ಬಾಳಿಕೆಗಳನ್ನು ಪ್ರಾರಂಭ ಮಾಡಿದ್ದಾನೆ.

ಸಾಮ್ರಾಜ್ಯಶಾಹಿಗಳ ಕುತಂತ್ರ

ಪಾಕೀಸ್ತಾನದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಸಾಮ್ರಾಜ್ಯಶಾಹಿಗಳ ಕುತಂತ್ರದಿಂದ ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಅಂತರ ರಾಷ್ಟ್ರೀಯ ವಿದ್ಯಾಮಾನಗಳ ಏರುಪೇರುಗಳಿಂದ, ಅದರಲ್ಲೂ ಮುಖ್ಯ

ಜಿ. ವಿ. ಶ್ರೀರಾಮು ರೆಡ್ಡಿ

ವಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಕೈವಾಡ ಮತ್ತು ಪಿತೂರಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಪ್ರಪಂಚದಲ್ಲಿನ ಪ್ರಜಾಪ್ರಭುತ್ವವಾದಿ, ರಾಷ್ಟ್ರೀಯ ಭಾವನೆಗಳನ್ನು ಹತ್ತಿಕ್ಕುವದಕ್ಕೆ ಎಂತಹ ಹೇಯ ಕೃತ್ಯಗಳಿಗೆ ಹೇಸದ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಅಂತರರಾಷ್ಟ್ರೀಯ. ರಾಜಕಾರಣದಲ್ಲಿ ತಾನು ಕಳೆದುಕೊಂಡಿರುವ ತನ್ನ ಪ್ರಭಾವವನ್ನು ಮರಳಿ ಪಡೆಯಲು ತನ್ನ ಅಸಹ್ಯ ಕೃತ್ಯಗಳನ್ನು ಮತ್ತೆ ಚುರುಕುಗೊಳಿಸಿದೆ. ಇರಾನಿನಲ್ಲಿ ತನ್ನ ಬಂಟ ಷಾನು ಅಧಿಕಾರ ಕಳೆದುಕೊಂಡು ದೇಶಭ್ರಷ್ಟನಾದ ಮೇಲೆ (ನಂತರ ಸತ್ತು ಹೋದ) ತಾನು ಅಲ್ಲಿ ಮಾಡಿದ ರೀತಿಯಲ್ಲೇ ಮಾಡುವ ಆಸೆಯಿಂದ ಅದರ ಪ್ರಯೋಗವನ್ನು ಪಾಕೀಸ್ತಾನದಲ್ಲಿ ಮಾಡಲು ಸರ್ವಸಿದ್ಧತೆಯನ್ನು ಮಾಡುತ್ತಿದೆ. ಈ ತಾಳಕ್ಕೆ ಸರಿಯಾಗಿ ಜಿಯಾ-ಉಲ್ ಹಕ್ ಅವರು 1959ರ ಪಾಕೀಸ್ತಾನ ಮತ್ತು ಅಮೇರಿಕಾ ನಡುವಿನ ಒಪ್ಪಂದವನ್ನು ಜಾರಿಗೆ ತರಬೇಕೆಂದು ಒತ್ತಾಯಿಸುತ್ತಿದ್ದಾರೆ. ಇದರ ಪ್ರಕಾರ ಯಾವುದೇ ಹೊರಗಿನ ಶಕ್ತಿಗಳು ಪಾಕೀಸ್ತಾನದ ಮೇಲೆ ದಾಳಿಯ ಬೆದರಿಕೆಯನ್ನು ಒಡ್ಡಿದಾಗ ಅಮೇರಿಕಾವು ಇದಕ್ಕೆ ಸಹಾಯ ಮಾಡಬೇಕೆಂದು ಅದಕ್ಕಾಗಿ ಒಂದು ರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಪದೇಪದೇ ಒತ್ತಾಯಿಸುತ್ತಿತ್ತು. ಇದನ್ನು ಕಾರ್ಟರ್ ಸರ್ಕಾರ ಒಪ್ಪದ ಕಾರಣ ಜಿಯಾ ಅವರು ಆಗಿನ ಅಮೇರಿಕನ್ ಸರ್ಕಾರ ನೀಡಿದ್ದ 460 ಮಿಲಿಯ ಡಾಲರ್‌ಗಳಷ್ಟು ಸಹಾಯವನ್ನು ನಿರಾಕರಿಸಿದ್ದರು. ಇಷ್ಟಕ್ಕೆ ಸುಮ್ಮನಾಗದ ಜಿಯಾ ಅವರು ಬ್ರಿಟನ್ ಪ್ರಧಾನಿ ಶ್ರೀಮಂತಿ ಮಾರ್ಗರೇಟ್ ಥಾಚರ್ ಮತ್ತು ಅಮೇರಿಕಾದ ಮಾಜೀ ಅಧ್ಯಕ್ಷ ನಿಕ್ಸನ್‌ರ ಮುಖಾಂತರ ರೀಗನ್ ಸರ್ಕಾರದ ಮೇಲೆ ಒತ್ತಾಯ ತಂದರು. ಇದಕ್ಕೆ ಅಮೇರಿಕಾ ಸರ್ಕಾರವು ಒಪ್ಪಿದಂತೆ ಕಾಣುತ್ತದೆ. ಇದರ ಜೊತೆಗೆ ಬ್ರಿಟನ್ ಮತ್ತು ಇತರೆ ಪಶ್ಚಿಮ ರಾಷ್ಟ್ರಗಳಿಂದಲೂ ಸಹಾ ಆಯುಧಗಳನ್ನು ತರಿಸಿಕೊಳ್ಳುವ ಯೋಜನೆಗಳನ್ನು ಹಾಕುತ್ತಿದೆ. ಇದರಿಂದಾಗಿಯೇ ಬ್ರಿಟನ್ ಪ್ರಧಾನಿ ಶ್ರೀಮಂತಿ ಮಾರ್ಗರೇಟ್ ಥಾಚರ್ ಅವರು ಈತಿಂಗಳು ಅಂದರೆ 1981 ಏಪ್ರಿಲ್ 15 ರಿಂದ 19ರ ವರೆಗಿನ ಭಾರತದ ವಿಫಲ ಪ್ರವಾಸದಲ್ಲಿ, ಪಾಕೀಸ್ತಾನಕ್ಕೆ ಆಯುಧಗಳ ಅವಶ್ಯಕತೆ ಇದೆ, ಅಷ್ಟೇ ಅಲ್ಲ ಆಯುಧಗಳನ್ನು ಪಡೆಯುವುದು ಅದರ ಹಕ್ಕು ಎಂದು 17-4-81ರಂದು ದೆಹಲಿಯ ಪತ್ರಿಕಾ ಸಮ್ಮೇಳನದಲ್ಲಿ ಸ್ಪಷ್ಟಪಡಿಸಿದ್ದಾರೆ. ಇದಕ್ಕೆ ಅವರು ಕೊಟ್ಟಿರುವ ಕಾರಣ ರಷಿಯಾದವರು ಆಫಘಾನೀಸ್ತಾನದಲ್ಲಿ ಆಕ್ರಮಣ ಮಾಡಿರುವುದರಿಂದ ಪಾಕೀಸ್ತಾನದ ಸ್ವಾತಂತ್ರ್ಯಕ್ಕೆ ತೀವ್ರ ರೀತಿಯ ಧಕ್ಕೆ ಇರುವುದರಿಂದ ಪಾಕೀಸ್ತಾನಕ್ಕೆ ಆಯುಧಗಳು ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಈ ಆಯುಧಗಳ ಸರಬರಾಜಿನ ಬಗ್ಗೆ ಒಂದು ಒಪ್ಪಂದವನ್ನು ಕುದುರಿಸಲು ಅಮೇರಿಕಾಗೆ ತೆರಳುವ ಸಮಯದಲ್ಲಿ 16-4-81ರಂದು ಪಾಕೀಸ್ತಾನದ ವಿದೇಶಾಂಗ ಮಂತ್ರಿ ಆಶಾಹಿ ಅವರು ಇಸ್ಲಾಮಾಬಾದಿನ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ, ಭಾರತಕ್ಕೆ ಬೆದರಿಕೆ ಹಾಕಿದ್ದಾರೆ. ಮತ್ತು ಪಾಕೀಸ್ತಾನ ಬಲಿಷ್ಠವಾಗುವುದು ಭಾರತಕ್ಕೆ ಇಷ್ಟವಿಲ್ಲವೆಂದು ತಿಳಿಸಿದ್ದಾರೆ.

ಮೇಲಿನ ಎಲ್ಲಾ ವಿದ್ಯಮಾನಗಳನ್ನು ನೋಡುವಾಗ ಅಫಘಾನೀಸ್ತಾನದ ಸರ್ಕಾರದ ಬೇಡಿಕೆಯಂತೆ ಅಲ್ಲಿನ ಸರ್ಕಾರದ ಸಹಾಯಕ್ಕಾಗಿ ಮತ್ತು ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಎದುರಿಸುವ ಸಲುವಾಗಿ ರಷಿಯಾದ ಸೈನಿಕರು ಹೋಗಿರುವುದನ್ನು ನೆಪಮಾಡಿಕೊಂಡು ಸಾಮ್ರಾಜ್ಯಶಾಹಿ ಶಕ್ತಿಗಳು ಏಷ್ಯಾದ ಉಪಖಂಡದಲ್ಲಿ ತಮ್ಮ ಪಿತೂರಿಗಳನ್ನು ನಡೆಸಲು ಪಾಕೀಸ್ತಾನವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಆಧಾರವೆಂಬಂತೆ ಬ್ರಿಟನ್ ಪ್ರಧಾನಿಯವರು ದೆಹಲಿಯಲ್ಲಿ ಸುದ್ದಿಗಾರರೊಡನೆ ಡಿಯೋಗಾಗಾರ್ಷಿಯಾದ ಪ್ರಸ್ತಾಪವನ್ನು ಮಾಡುತ್ತಾ ಅದನ್ನು ಶಾಂತಿವಲಯವನ್ನಾಗಿ ಮಾಡುವ ಪ್ರಶ್ನೆಯೇ ಇಲ್ಲವೆಂದು ಹೇಳಿದ್ದಾರೆ. ಅದು ತಮ್ಮ ಮತ್ತು ಮಾರಿಷಿಸ್ ಸರ್ಕಾರದ ನಡುವಣ ಒಪ್ಪಂದವೆಂದು ಅದರ ಬಗ್ಗೆ ತಮ್ಮ ಮೇಲೆ ಯಾರೂ ಒತ್ತಾಯ ತರಬಾರದೆಂದು ಸ್ಪಷ್ಟಪಡಿಸಿದ್ದಾರೆ. ಈ ಎಲ್ಲಾ ಆಧಾರಗಳು ಸಾಮ್ರಾಜ್ಯಶಾಹಿಗಳ ನಿಜವಾದ ಉದ್ದೇಶವೇನೆಂಬುದನ್ನು ಸ್ಪಷ್ಟಪಡಿಸುತ್ತವೆ. ಪಾಕೀಸ್ತಾನ ಮತ್ತು ಭಾರತದ ಮಧ್ಯೆ ಸುಮಧುರ ಸಂಬಂಧಕ್ಕೆ ಯಾವಾಗಲೂ ವಿರೋಧವಾಗಿ ಸಾಮ್ರಾಜ್ಯಶಾಹಿಗಳು ಹಿಂದಿನಿಂದಲೂ ಪ್ರಯತ್ನ ಮಾಡುತ್ತಿದ್ದಾರೆ. ಅಷ್ಟೆ ಅಲ್ಲ, ಅವೆರಡು ದೇಶಗಳ ಮಧ್ಯೆ ಯಾವುದಾದರೂ ಒಂದು ಕಾರಣವನ್ನು ಹುಡುಕಿ ದ್ವೇಷವನ್ನು ಬೆಳೆಸುವುದಕ್ಕೆ ಸತತ ಪ್ರಯತ್ನಗಳನ್ನು ಮಾಡುತ್ತಿವೆ ಎಂಬುದು ಚರಿತ್ರೆಯಿಂದ ಗೊತ್ತಾಗಿರುವ ಸತ್ಯ.

ಇತ್ತೀಚಿನ ದಿನಗಳಲ್ಲಿ ಬಂಡವಾಳಶಾಹಿ ಜಗತ್ತಿನ ಆರ್ಥಿಕ ಬಿಕ್ಕಟ್ಟು ತೀವ್ರವಾಗಿ ಆದೇಶಗಳಲ್ಲಿ ಉತ್ಪಾದನೆ ಆಗುತ್ತಿರುವ ಸಾಮಗ್ರಿಗಳಿಗೆ ಆದೇಶಗಳಲ್ಲಿ ಮಾರುಕಟ್ಟೆ ಇಲ್ಲದಂತಾಗಿದೆ. ಹೇರಳ ರೀತಿಯಲ್ಲಿ ಹಣವನ್ನು ಖರ್ಚುಮಾಡಿ ಮಾರಕಾಯುಧಗಳನ್ನು ತಯಾರುಮಾಡಿದ್ದು ಅವುಗಳಿಗೆ ಮಾರುಕಟ್ಟೆ ಸಿಕ್ಕದಂತಾಗಿದೆ. ತನ್ನ ಸಾಮಗ್ರಿಗಳಿಗೆ ಮಾರುಕಟ್ಟೆ ಹುಡುಕುವ ಕಾರ್ಯಕ್ಕಾಗಿ "ಮಿತಿಯಾದ ಪರಮಾಣು ಯುದ್ಧವನ್ನು" ಪ್ರತಿಪಾದಿಸಿ ತನ್ನ ಮಿಲಿಟರಿ ಸಾಮಗ್ರಿಗಳಿಗೋಸ್ಕರ ಯುದ್ಧಗಳನ್ನು ಹುಟ್ಟುಹಾಕುತ್ತಿದ್ದಾರೆ. ಇದರ ಫಲವೇ ಇರಾನ್ ಮತ್ತು ಇರಾಕ್

(7ನೇ ಪುಟ ನೋಡಿ)

ಶಹಬಾದ್ ಎ. ವಿ. ಬಿ. ಕಾರ್ಮಿಕರ ವಿಜಯ

ಕ್ಷುಲ್ಲಕ ಕಾರಣಗಳನ್ನು ಮುಂದೆ ಮಾಡಿ ಶಹಾಬಾದ್‌ನ ಎ.ವಿ.ಬಿ. ಫ್ಯಾಕ್ಟರಿಯ ಆಡಳಿತವರ್ಗ ಕಾರ್ಮಿಕ ಮುಂದಾಳು ಶ್ರೀ ಕೃಷ್ಣಮೂರ್ತಿಯವರನ್ನು ವಜಾಮಾಡಿತ್ತು. (ಇತ್ತೀಚೆಗೆ ಇಲ್ಲಿ ಸಿ.ಐ.ಟಿ.ಯು. ಸಂಘ ಸ್ಥಾಪನೆಯಾಗಿದೆ.)

ಆಡಳಿತವರ್ಗದ ಏಕಪಕ್ಷೀಯ ಕ್ರಮವನ್ನು ಪ್ರತಿಭಟಿಸಿ ಶಹಾಬಾದ್ ಎ.ವಿ.ಬಿ. ವರ್ಕರ್ಸ್ ಯೂನಿಯನ್ನಿನ ಪ್ರಧಾನಕಾರ್ಯದರ್ಶಿ ಕಾಂ. ಪುಷ್ಪರಾಜ್ 8-4-81ರಿಂದ ಆಮರಣ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದರು. 13-4-81ರಂದು ಗುಲ್ಬರ್ಗದ ಎ.ಎಲ್.ಸಿ. ಮಧ್ಯಸ್ಥಿಕೆಯಿಂದ ಶ್ರೀ ಕೃಷ್ಣಮೂರ್ತಿಯವರ ವಜಾಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಸುಮುಖವಾಗಿ ತೀರ್ಮಾನಿಸಲು ಆಡಳಿತವರ್ಗ ಒಪ್ಪಿಕೊಂಡಿತು.

6 ದಿನಗಳವರೆಗೆ ನಡೆದ ಆಮರಣ ಸತ್ಯಾಗ್ರಹದ ಪ್ರತಿದಿನವೂ ಮೆರವಣಿಗೆ-ಪ್ರದರ್ಶನಗೇಟ್ ಮೀಟಿಂಗ್‌ಗಳು ನಡೆದವು. 11-4-81 ರಂದು ಶಹಾಬಾದ್ ಭಾಗಶಃ ಬಂದ್ ಆಚರಿಸಿತು. 12-4-81ರಂದು ಡಿ.ಐ.ಸಿ. ಶ್ರೀ ಸಿನ್ಹಾ ಅವರ ಮನೆ ಎದುರು ಧರಣಿ ಸತ್ಯಾಗ್ರಹ ನಡೆಸಿತ್ತು. ಎ.ಸಿ.ಸಿ. ಸಿಮೆಂಟ್ ಕೆಲಸಗಾರರ ಯೂನಿಯನ್, ಗುಲ್ಬರ್ಗದ ಎಂ.ಎಸ್.ಕೆ. ಮಿಲ್ ಕೆಲಸಗಾರರು, ಕೆ.ಎಸ್.ಆರ್.ಟಿ.ಸಿ. ಕೆಲಸಗಾರರ ಸಂಘದವರು ಅಲ್ಲದೇ ಕೇಂದ್ರ ಕಾರ್ಮಿಕ ಸಂಘಗಳಾದ ಯು.ಟಿ.ಯು.ಎಫ್., ಎ.ಐ.ಟಿ.ಯು.ಸಿ. ಮತ್ತು ಸಿ.ಪಿ.ಐ., ಸಿ.ಪಿ.ಐ.(ಎಂ), ದಲಿತ ಸಂಘರ್ಷ ಸಮಿತಿ, ವಿದ್ಯಾರ್ಥಿ ಸಂಘಟನೆಗಳು ಮೊದಲಾದವರು ಸೌಹಾರ್ದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

13-4-81ರಂದು ಉಪವಾಸ ಸತ್ಯಾಗ್ರಹ ಕೊನೆಗೊಂಡ ಸಂದರ್ಭದಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಕಾಂ. ಗಂಗಾಧರ ನಮೋಶಿ (ಸಿ.ಐ.ಟಿ.ಯು.), ಕಾಂ. ಕಾಂತಾ (ಎಚ್.ಎಂ.ಎಸ್.), ಕಾಂ. ಕಿಶನ್ ರಾವ್ (ಕೆ.ಎಸ್.ಆರ್.ಟಿ.ಸಿ.), ಕಾಂ. ಸಿದ್ರಾಮಪ್ಪ (ಯು.ಟಿ.ಯು.ಎಫ್.), ಕಾಂ. ಗುರುನಾಥ (ಎ.ಐ.ಟಿ.ಯು.ಸಿ.) ಮತ್ತು ರೈತ ಕಾರ್ಮಿಕರ ಹೋರಾಟ ಸಮಿತಿಯ ಜಿಲ್ಲಾ ಸಂಚಾಲಕ ಕಾಂಗ್ರೆಸ್‌ನ ಶ್ರೀ ಹನುಮಂತ ರಾವ್ ದೇಸಾಯಿ ಮೊದಲಾದವರು ಕಾರ್ಮಿಕರನ್ನು ಅಭಿನಂದಿಸಿ ಮಾತನಾಡಿದರು.

ಈ ಹೋರಾಟದಲ್ಲಿ ಸಹಕರಿಸಿದ ಎಲ್ಲರಿಗೂ ಎ.ವಿ.ಬಿ. ವರ್ಕರ್ಸ್ ಯೂನಿಯನ್ ಅಧ್ಯಕ್ಷ ಕಾಂ. ಮಹಮ್ಮದ್ ಹಸನ್‌ಖಾನ್‌ರು ಕೃತಜ್ಞತೆ ವ್ಯಕ್ತಪಡಿಸಿದ್ದಾರೆ.

ಎಸ್.ಎಫ್.ಐ. ಬೆಂಬಲ

ಆಡಳಿತವರ್ಗದ ಕಾರ್ಮಿಕವಿರೋಧಿ ಧೋರಣೆಯ ವಿರುದ್ಧ ಹೋರಾಡುತ್ತಿದ್ದ ಕಾರ್ಮಿಕರಿಗೆ ಎಸ್.ಎಫ್.ಐ. ಬೆಂಬಲಿಸಿತ್ತು. ●

ರಾಣಿಬೆನ್ನೂರು ನೇಕಾರರ ಹೋರಾಟ

ಅತ್ಯಂತ ಕಡಿಮೆ ಕೂಲಿಯಲ್ಲಿ ಜೀವನ ನಿರ್ವಹಿಸುತ್ತಿರುವ ರಾಣಿಬೆನ್ನೂರ ತಾಲ್ಲೂಕ ನೇಕಾರ ಕಾರ್ಮಿಕರು ಹೋರಾಟಕ್ಕಿಳಿದಿದ್ದಾರೆ. ಕಾರ್ಮಿಕ ಅಧಿಕಾರಿಗಳಿಗೆ, ನೇಕಾರ ಮಾಲೀಕರಿಗೆ ತಮ್ಮ ಕಷ್ಟಕಾರ್ಪಣ್ಯಗಳ ಅನೇಕ ತಿಂಗಳಿಂದಲೂ ಮನವಿಮಾಡುತ್ತಾ ಬಂದಿದ್ದಾರೆ. ಕೊನೆಗೆ ಅನಿವಾರ್ಯವಾಗಿ 8-4-81ರಿಂದ ಹೋರಾಟಕ್ಕೆ ನಿರ್ಧರಿಸಿದರು. 8-4-81 ರಂದು ಒಂದು ದಿವಸದ ಸಾಂಕೇತಿಕ ಮುಷ್ಕರ ಆಚರಿಸಿದರು. ರಾಣಿಬೆನ್ನೂರು ತಹಸೀಲ್ದಾರರು ಈ ವಿಷಯದಲ್ಲಿ ತ್ರಿಪಕ್ಷೀಯ ಸಭೆ ಕರೆಯುವ ಆಶ್ವಾಸನೆ ಕೊಟ್ಟು 18-4-81ರ ವರೆಗೆ ತಮಗೆ ಅವಕಾಶ ನೀಡಬೇಕೆಂದು ಕೇಳಿಕೊಂಡರು. ಮಾಲೀಕರು ತಹಸೀಲ್ದಾರರ ಬಳಿ ತ್ರಿಪಕ್ಷೀಯ ಮಾತುಕತೆಗೆ ಒಪ್ಪಿಕೊಂಡು ದಿನಾಂಕ 9ರಂದು ಲಾಕ್ ಔಟ್ ಘೋಷಿಸಿದ್ದರು. ಆದರೆ ಕಾರ್ಮಿಕರ ಐಕ್ಯತೆ ಮತ್ತು ತಹಸೀಲ್ದಾರರ ಮಧ್ಯಸ್ಥಿಕೆಯಿಂದಾಗಿ 11-4-81ರಿಂದ ಲಾಕ್‌ಔಟ್ ಹಿಂತೆಗೆದುಕೊಂಡರು. 18-4-81ರಂದು ಮಾತುಕತೆ ವಿಫಲವಾಯಿತು. ಸಂಧಾನಕ್ಕೆ ಬರುವಂತೆ ಎಷ್ಟೇ ಪ್ರಯತ್ನಿಸಿದರೂ ವಿಫಲವಾದನಂತರ ನೇಕಾರ ಕಾರ್ಮಿಕ ಸಂಘದ ನಾಯಕ ಕಾಂ. ವಿ. ಎನ್. ಹಳಕಟ್ಟಿಯವರು ಕಾರ್ಮಿಕರೊಡನೆ ಸಮಾಲೋಚಿಸಿದ ನಂತರ ಹೋರಾಟಕ್ಕಿಳಿಯಬೇಕೆಂದು ನಿರ್ಧರಿಸಲಾಯಿತು. ಈ ತೀರ್ಮಾನದ ಪ್ರಕಾರ 4000 ನೇಕಾರ ಕಾರ್ಮಿಕರು 19ರಿಂದ ಹೋರಾಟದಲ್ಲಿದ್ದಾರೆ. ಸಾರ್ವಜನಿಕರ ಗಮನಸೆಳೆಯಲು ತಹಸೀಲ್ದಾರ ಆಫೀಸೆದುರು ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

18-4-81ರಂದು ಈ ಹೋರಾಟದ ಅಂಗವಾಗಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಹಳಕಟ್ಟಿ, ಕಾಂ. ಸೈಯದ್ ಸಾಹೇಬ್, ಕಾಂ. ಮಂಗಳೂರ ಮಠ, ಕಾಂ.ಎಸ್.ಎಫ್. ಕ್ಯಾದಗಿ ಹಾಗೂ ಬೆಳಗಾವಿಯ ದಿಲೀಪ್ ಕಾಮತ್ ಮೊದಲಾದವರು ಮಾತನಾಡಿದರು. ಈ ಹೋರಾಟಕ್ಕೆ ಸರ್ವರೀತಿಯ ಬೆಂಬಲ ನೀಡಬೇಕೆಂದು ಸಂಘದ ಪ್ರಧಾನಕಾರ್ಯದರ್ಶಿ ಕಾಂ. ಎಸ್. ಎಫ್. ಕ್ಯಾದಗಿ ವಿನಂತಿಸಿದ್ದಾರೆ. ●

ದಾಸ್‌ಪ್ರಕಾಶ್ ಹೋಟೆಲ್ ಕಾರ್ಮಿಕರ ಸಭೆ

12-4-81ರಂದು ಮೈಸೂರಿನ ದಾಸ್‌ಪ್ರಕಾಶ್ ಹೋಟೆಲ್ ಕಾರ್ಮಿಕರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆ ವಹಿಸಿದ ಕಾಂ. ಮೋಹನ್ ಕುಮಾರರು, ಕುದುರೆಮುಖದ ಎಚ್.ಎಸ್.ಸಿ.ಎಲ್. ಕಾರ್ಮಿಕರ, ಮೈಕೋ ಕಾರ್ಮಿಕರ ಹೋರಾಟ ಮತ್ತು ಬೆಳೆದುಬರುತ್ತಿರುವ ರೈತ ಕಾರ್ಮಿಕರ ಐಕ್ಯ ಹೋರಾಟಗಳ ಬಗ್ಗೆ ವಿವರಿಸಿದರು. ಕುದುರೆಮುಖ ಕಾರ್ಮಿಕರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಕಾರ್ಮಿಕರ ಸಹಾಯಾರ್ಥವಾಗಿ 103ರೂ.ಗಳನ್ನು ಸಂಗ್ರಹಿಸಲಾಯಿತು. ಮೈಕೋ ಕಾರ್ಮಿಕರ ಮೇಲೆ ಇಂಟಕ್‌ನವರ ಗೂಂಡಾಗಿರಿಯನ್ನು ಖಂಡಿಸಲಾಯಿತು.

ಗೋಲಿಬಾರ್ ಖಂಡನೆ

ತಮ್ಮ ಸಂಕಷ್ಟಗಳಿಂದಾಗಿ ಅನಿವಾರ್ಯವಾಗಿ ಹೋರಾಟಕ್ಕಿಳಿದ ನಿಪ್ಪಾಣಿಯ ತಂಬಾಕು ಬೆಳೆಗಾರರ ಮೇಲೆ ಪೋಲೀಸರು ಗುಂಡುಹಾರಿಸಿ ಅನೇಕ ಜನರ ಸಾವಿಗೆ ಕಾರಣವಾಗಿದ್ದನ್ನು ಗುಲ್ಬರ್ಗಾ ಎಸ್.ಎಫ್.ಐ. ಉಗ್ರವಾಗಿ ಖಂಡಿಸಿದೆ. ಮಡಿದವರ ಕುಟುಂಬಗಳಿಗೆ ಸರಕಾರ ಕೂಡಲೇ ಯೋಗ್ಯ ಪರಿಹಾರಧನ ಕೊಡಬೇಕೆಂದು ಮತ್ತು ನ್ಯಾಯಾಂಗ ವಿಚಾರಣೆಯಾಗಬೇಕೆಂದು ಗುಲ್ಬರ್ಗಾ ಎಸ್.ಎಫ್.ಐ. ಘಟಕದ ಪ್ರಧಾನಕಾರ್ಯದರ್ಶಿ ಕಾಂ. ಶಿವಶರಣ ಮುಗಳಿ ಒತ್ತಾಯಿಸಿದ್ದಾರೆ.

○

ಆಟೋ ಚಾಲಕರ ಸಭೆ

21-4-81ರಂದು ಬೆಂಗಳೂರಿನ ಆಂಧ್ರ ದೇವಾಂಗ ಸಂಘದಲ್ಲಿ ಬೆಳಗ್ಗೆ ಆಟೋ ಚಾಲಕರ ಸರ್ವಸದಸ್ಯರ ಸಭೆ ನಡೆಯಿತು. ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1. ಹೊಸ ಪರ್ಮಿಟ್‌ಗಳನ್ನು ಚಾಲಕರಿಗೆ ಮತ್ತು ಪರ್ಮಿಟ್‌ಗಳ ಅವಧಿ ಮುಗಿದಿರುವ ಆಟೋರಿಕ್ಷಾಗಳಿಗೆ ಪರ್ಮಿಟ್ ಕೊಡುವದಾಗಿ ಆರ್. ಟಿ. ಓ. ಅಧಿಕಾರಿಗಳು ನಗರದ 3000 ಆಟೋ ಚಾಲಕರಿಂದ ತಲಾ 100ರೂ.ಗಳಂತೆ ಹಣ ಪಡೆದು 6 ತಿಂಗಳು ಕಳೆದರೂ ಇನ್ನೂ ಪರ್ಮಿಟ್ ಕೊಟ್ಟಿಲ್ಲ. ಈ ತಿಂಗಳ ಕೊನೆಯೊಳಗೆ ಈ ಬಗ್ಗೆ ತೀರ್ಮಾನ ಕೈಗೊಳ್ಳದಿದ್ದರೆ ಮೇ 1ರಂದು ಸಾರಿಗೆ ಕಮೀಷನರ ಕಚೇರಿ ಎದುರು ಮತಪ್ರದರ್ಶನ ಮಾಡುವ ತೀರ್ಮಾನ ಕೈಗೊಳ್ಳಲಾಯಿತು.

2. ನಗರದ ಕಾರ್ಮಿಕ ಸಂಘಟನೆಗಳ ಮೇಲೆ, ಕಾರ್ಮಿಕ ಮುಖಂಡರ ಮೇಲೆ ಮತ್ತು ಸಂಘಸಂಸ್ಥೆಗಳ ಮೇಲೆ ನಡೆಯುತ್ತಿರುವ ಗೂಂಡಾದಾಳಿಯನ್ನು ಖಂಡಿಸಲಾಯಿತು.

ಸಂಘದ ಉಪಾಧ್ಯಕ್ಷ ಕಾಂ. ಕೆ. ವಿ. ಹುಸೇನ್‌ರ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಈ ಕೆಳಕಂಡವರನ್ನು ಸಂಘದ ನೂತನ ಪದಾಧಿಕಾರಿಗಳಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಕಾಂ. ಕೆ. ಆರ್. ವೆಂಕಟೇಶಗೌಡ, ಉಪಾಧ್ಯಕ್ಷರಾಗಿ ಕೆ.ಎ. ಹುಸೇನ್, ಪಿ. ಕೆ. ಸುಬ್ರಮಣಿ ಮತ್ತು ಪಿ. ಸುಬ್ಬರಾವ್, ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಎ. ವಿ. ರಮೇಶ್, ಸಹ ಕಾರ್ಯದರ್ಶಿಗಳಾಗಿ ಅಬ್ದುಲ್ ಅಲೀಮ್, ಕೆ. ಆರ್. ರಾಜಗೋಪಾಲ್ ಮತ್ತು ವಿ. ಸದಾಶಿವ ಮತ್ತು ಖಜಾಂಚಿಯಾಗಿ ಕಾಂ. ಬಿ. ಕೆ. ನಾಗರಾಜರನ್ನು ಚುನಾಯಿಸಲಾಯಿತು.

○

ಚಂದಾ ವಿವರ

ವಾರ್ಷಿಕ ಚಂದಾ	: 25ರೂ.
6 ತಿಂಗಳಿಗೆ	: 13ರೂ.
ಬಿಡಿ ಪ್ರತಿ	: 50ಪೈಸೆ

ಅಂಬೇಡ್ಕರ್ ಜಯಂತಿ ಆಚರಣೆ

ಸುಳ್ಯ :

14-4-81ರಂದು ದ.ಕ. ಜಿಲ್ಲೆಯ ಸುಳ್ಯದಲ್ಲಿ ದಲಿತ ಸಂಘರ್ಷ ಸಮಿತಿ ಆಶ್ರಯದಲ್ಲಿ ಡಾ॥ ಬಿ. ಆರ್. ಅಂಬೇಡ್ಕರರ 90ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ದ.ಸಂ.ಸ.ಯ ಜಿಲ್ಲಾ ಸಂಚಾಲಕ ಕಾಂ. ಬಿ. ರಾಮಕೃಷ್ಣ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಪುರುಷೋತ್ತಮ ಬಿಳಿಮಲೆ, ಎಸ್. ಸುಬ್ಬಯ್ಯ ನಾಯ್ಕ ಮತ್ತು ಕಾಂ. ಸೂರ್ಯನಾರಾಯಣ ಭಟ್‌ರು ಉಪಸ್ಥಿತರಿದ್ದರು.

ಶೋಷಿತ ಜನಸಾಮಾನ್ಯರ ಬದುಕಿಗೆ ಅರ್ಥಕಟ್ಟಿಸುವ ಹೋರಾಟ ಜೀವಿಯಾದಅಂಬೇಡ್ಕರರ ಬದುಕಿನ ಬಗ್ಗೆ ಅತಿಥಿಗಳು ಮಾತನಾಡಿದರು. ಅಧ್ಯಕ್ಷಸ್ಥಾನದಿಂದ ಕಾಂ. ರಾಮಕೃಷ್ಣ ಮಾತನಾಡಿ ಅಂಬೇಡ್ಕರರು ಬೋಧಿಸಿದ ಜಾತಿ ಹೋರಾಟವನ್ನು ವರ್ಗ ಹೋರಾಟವನ್ನಾಗಿ ದಲಿತರು ಮುಂದುವರೆಸಬೇಕು ಎಂದು ಹೇಳಿ ವ್ಯವಸ್ಥೆಯ ಕರಾಳತೆಗೆ ಸಿಕ್ಕ ಶೋಷಿತರೆಲ್ಲರೂ ವ್ಯವಸ್ಥೆ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು.

ಮೀಸಲಾತಿ ಮುಂದುವರೆಯಬೇಕು, ಕೃಷಿ ಕಾರ್ಮಿಕರಿಗೆ 10ರೂ. ಕೂಲಿ ದೊರೆಯಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಪ್ರಾರಂಭದಲ್ಲಿ ಕಾಂ. ಸರಸ್ವತಿ ಸ್ವಾಗತಿಸಿದರು. ಕೊನೆಗೆ ಎ. ಕೆ. ಅಜಿಲರು ಧನ್ಯವಾದಗಳನ್ನರ್ಪಿಸಿದರು.

ಕೆ. ಜಿ. ಎಫ್.

14-4-81ರಂದು ಕೆ.ಜಿ.ಎಫ್.ನ ಬಿ.ಜಿ.ಎಂ. ಎಂಪ್ಲಾಯೀಸ್ ಯೂನಿಯನ್‌ನ ಆಫೀಸಿನಲ್ಲಿ ಡಾ॥ ಅಂಬೇಡ್ಕರರ ಜಯಂತಿಯನ್ನು ಆಚರಿಸಲಾಯಿತು. ಶ್ರೀ ಮುತ್ತುಕುಮಾರ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪಿ. ಎಂ. ಸಾಮಿ ದೊರೈ (ಮಾಜೀ ಶಾಸಕ) ಅವರು ಡಾ॥ ಅಂಬೇಡ್ಕರರ ಭಾವಚಿತ್ರವನ್ನು ಯೂನಿಯನ್ ಆಫೀಸಿನಲ್ಲಿ ಅನಾವರಣ ಮಾಡಿದರು. ಶ್ರೀ ಏಕಾಂಬರಂ ಮಾತನಾಡಿ 12,000 ರೂ. ಮತ್ತು ಅದಕ್ಕೂ ಕಮ್ಮಿ ವಾರ್ಷಿಕ ಆದಾಯವಿರುವ ಬಡಜನರಿಗೆ ಶೈಕ್ಷಣಿಕ ಮತ್ತಿತರ ರಿಯಾಯಿತಿ ನೀಡಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸಿದರು. ಕೇರಳ ಸರ್ಕಾರ ಈಗಾಗಲೇ ಇದನ್ನು ಜಾರಿಗೆ ತಂದಿರುವದನ್ನು ಉದಾಹರಿಸಿದರು. ಡಾ॥ ಅಂಬೇಡ್ಕರರ ಜನ್ಮದಿನವಂದು ವೇತನ ಸಹಿತ ರಜೆ ಪಡೆಯಲು ಯೂನಿಯನ್ ಪ್ರಯತ್ನಿಸುತ್ತಿದೆ ಎಂದು ಯೂನಿಯನ್ ಕಾರ್ಯದರ್ಶಿ ಕಾಂ. ಸವರೀದಾಸ್ ತಿಳಿಸಿದರು.

○

ಈ ದುರಂತ ಪಾಕಿಸ್ತಾನಕ್ಕಷ್ಟೇ ಸೀಮಿತವೇ?

(5ನೇ ಪುಟದಿಂದ)

ಯುದ್ಧ. ಈಗ ಅದನ್ನು ಏಷ್ಯಾದ ಉಪಖಂಡದಲ್ಲಿ ಪ್ರಾರಂಭಮಾಡಲು ಈ ಕುಟಿಲ ನಾಟಕವನ್ನು ಆಡುತ್ತಿದ್ದಾರೆ.

ಕೆಲವು ಪ್ರತಿಗಾಮಿ ಮುಸ್ಲಿಂ ರಾಷ್ಟ್ರಗಳ ಪಾತ್ರ

ಅಮೇರಿಕಾ ಮತ್ತು ಇತರೆ ಕೆಲವು ಪಶ್ಚಿಮ ರಾಷ್ಟ್ರಗಳು ಏಷ್ಯಾದ ಉಪಖಂಡದಲ್ಲಿ ತಾವು ಆಡಲು ಯೋಚಿಸಿರುವ ಕುಟಿಲ ನಾಟಕಕ್ಕೆ ಪೂರಕವಾಗಿ ಕೆಲವು ಪ್ರತಿಗಾಮಿ ಮುಸ್ಲಿಮ್ ರಾಷ್ಟ್ರಗಳು ಕೆಲಸಮಾಡುತ್ತಿವೆ. ತೀವ್ರ ರೀತಿಯ ಆರ್ಥಿಕ ಬಿಕ್ಕಟ್ಟಿಗೆ ಸಿಕ್ಕಿರುವ ಪಾಕಿಸ್ತಾನಕ್ಕೆ ಯುದ್ಧಸಾಮಗ್ರಿಗಳನ್ನು ಕೊಳ್ಳಲು ಹೇರಳವಾಗಿ ಆರ್ಥಿಕ ಸಹಾಯವನ್ನು ಮಾಡುತ್ತಿವೆ. ಇದರಲ್ಲಿ ಮುಖ್ಯವಾಗಿ ಸೌದಿ ಅರೇಬಿಯಾ ದೇಶವು ಶಕ್ತಿಮೀರಿ ಶ್ರಮಿಸುತ್ತಿದೆ. ಪ್ರಪಂಚದಲ್ಲೆಲ್ಲಾ ಇಸ್ಲಾಂ ಧರ್ಮವು ಪ್ರಸಿದ್ಧಿಹೊಂದಬೇಕೆಂಬ ದುರಾಶೆಯಿಂದ ಮತ್ತು ಪಾಕಿಸ್ತಾನದಲ್ಲಿ ಇಸ್ಲಾಂ ಧರ್ಮದ ಎಲ್ಲ ಕಾನೂನುಗಳನ್ನು ಜಾರಿಗೆ ತರುವ ಹೆಸರಿನಲ್ಲಿ ಸೌದಿ ಅರೇಬಿಯಾವು ಜನರಲ್ ಜಿಯಾ ಅವರ ಎಲ್ಲಾ ಪಾಶವೀಕೃತ್ಯಗಳಿಗೂ ತನ್ನ ಬೆಂಬಲವನ್ನು ಕೊಡುತ್ತಿದೆ. ಅಷ್ಟೇ ಅಲ್ಲದೆ ಪಾಕಿಸ್ತಾನದಲ್ಲಿ ಇರುವ ಕೆಲವು ಮತಾಂಧ ಶಕ್ತಿಗಳು ಮುಖ್ಯವಾಗಿ ಜಮಾಯತ್-ಎ-ಇಸ್ಲಾಮ್ ಅಂತಹ ಸಂಘಟನೆಗಳಿಗೆ ಎಲ್ಲಾ ರೀತಿಯ ಸಹಾಯವನ್ನು ನೀಡಿ ಪಾಕಿಸ್ತಾನದ ಸರ್ವಾಧಿಕಾರಿಗೆ ಬೆಂಬಲವನ್ನು ನೀಡುವಂತೆ ಪ್ರೋತ್ಸಾಹಮಾಡಿ ಅಲ್ಲಿನ ಜನರ ಮತಾಭಿಮಾನವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.

ಇದಕ್ಕಿಂತ ಮುಖ್ಯವಾಗಿ ಸೌದಿ ಅರೇಬಿಯಾ ದೇಶವು ಸಾಮ್ರಾಜ್ಯಶಾಹಿಗಳ ಒಳಸಂಚಿಗೆ ಬಲಿಯಾಗಿ ಮಧ್ಯಪೂರ್ವ ಪ್ರಾಂತ್ಯಗಳಲ್ಲಿ ಇರುವ ಇಸ್ಲಾಮ್ ರಾಷ್ಟ್ರಗಳನ್ನು ಸಾಮ್ರಾಜ್ಯಶಾಹಿಗಳ ಕೈಗೊಂಬೆಗಳನ್ನಾಗಿ ಮಾಡುವ ರೀತಿಯಲ್ಲಿ ಪ್ರಯತ್ನ ಮಾಡುತ್ತಿದೆ. ಇಸ್ಲಾಮ್ ಧರ್ಮದ ಶ್ರೇಷ್ಠತೆಯ ಹೆಸರಿನಲ್ಲಿ ಆ ದೇಶಗಳ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನಮಾಡುವುದರ ಜೊತೆಗೆ ಅಲ್ಲಿನ ಜನತೆ ಎದುರಿಸುತ್ತಿರುವ ನಿಜವಾದ ಸಮಸ್ಯೆಗಳಿಂದ ದೂರಸರಿಸಲು, ಅಮೇರಿಕನ್ ಸಾಮ್ರಾಜ್ಯಶಾಹಿಗಳ ಗುಲಾಮರನ್ನಾಗಿಮಾಡಲು ಪ್ರಯತ್ನ ಮಾಡುತ್ತಿವೆ. ಇಂತಹ ಅಪಾಯಕಾರಿ ಲಕ್ಷಣಗಳ ವಿರುದ್ಧ ಜಗತ್ತಿನ ಪ್ರಜಾಪ್ರಭುತ್ವಶಕ್ತಿಗಳು ಮತ್ತು ಜಾತ್ಯಾತೀತ ಶಕ್ತಿಗಳು ಎಚ್ಚರದಿಂದ ಇರಬೇಕಾಗಿರುವ ಅವಶ್ಯಕತೆ ಇದೆ.

ಇಂದು ಪಾಕಿಸ್ತಾನದಲ್ಲಿ ಏನಾಗುತ್ತಿದೆ?

ಭುಟ್ಟೋರವರನ್ನು ಕೊಲೆಮಾಡಿದ ಮೇಲೆ ಜಿಯಾ-ಉಲ್-ಹಕ್ ಅವರ ತನ್ನ ಪಾಶವೀಕೃತ್ಯದ ದಬ್ಬಾಳಿಕೆಯನ್ನು ಹೆಚ್ಚಿಸತೊಡಗಿ ಈಗ ಅದು ಗರಿಷ್ಠ ಮಟ್ಟವನ್ನು ಮುಟ್ಟಿದೆ. ರಾಜಕೀಯ ಪಕ್ಷಗಳನ್ನು ನಿಷೇಧಿಸಿ ಅವುಗಳ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲುಹಾಕಿ ಪತ್ರಿಕಾ ಸ್ವಾತಂತ್ರ್ಯವನ್ನು ಸಂಪೂರ್ಣ ನಾಶಮಾಡಿದ್ದಾರೆ. ಈ ಎಲ್ಲಾ ದಾಳಿದಬ್ಬಾಳಿಕೆಯ ವಿರುದ್ಧ ತನಗೆ ಸಾಧ್ಯವಿದ್ದ ಎಲ್ಲಾ ರೀತಿಯಲ್ಲಿ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದಾರೆ ಮತ್ತು ಹೋರಾಟದಲ್ಲಿ ಧುಮುಕಿದ್ದಾರೆ. ವಕೀಲರು, ವೈದ್ಯರು, ವಿದ್ಯಾರ್ಥಿಗಳು ಮತ್ತು ಯುವಜನರು ಬಹಿರಂಗವಾಗಿ ವಿರೋಧ ಪಕ್ಷಗಳಿಗೆ ಬೆಂಬಲನೀಡಿ ಬೀದಿಗಿಳಿದಿದ್ದಾರೆ. 1981 ಮಾರ್ಚ್ 24ರಂದು ಸಂವಿಧಾನವನ್ನು ತಿದ್ದುಪಡಿ ಮಾಡಿದರ ವಿರುದ್ಧ ಮತ್ತು ರಾಜಕೀಯ ಪಕ್ಷಗಳನ್ನು ನಿಷೇಧಿಸಿದರ ವಿರುದ್ಧ ಲಕ್ಷಾಂತರ ಜನರು ಪ್ರತಿಭಟಿಸಿ ಜೈಲಿಗೆ ಹೋಗಿದ್ದಾರೆ. ಮಾರ್ಚ್ 24ರ ಸಂವಿಧಾನದ ತಿದ್ದುಪಡಿಯ ಪ್ರಕಾರ ಸಂಪೂರ್ಣ ಅಧಿಕಾರವನ್ನು ಪಡೆದು ತನಗೆ ಇಷ್ಟಬಂದ ರೀತಿಯಲ್ಲಿ ಸಂವಿಧಾನ ಬದಲಾಯಿಸುವ ಹಕ್ಕನ್ನು ಪಡೆದುಕೊಂಡಿದ್ದಾರೆ. ಇಂತಹ ಸಂವಿಧಾನವನ್ನು ತಂದಾಗ ಅದರ ಪ್ರಕಾರ ಪ್ರಮಾಣವಚನ ಸ್ವೀಕರಿಸಲು ನಿರಾಕರಿಸಿ ಕೆಲವು ನ್ಯಾಯಾಧೀಶರು ರಾಜೀನಾಮೆ ಕೊಟ್ಟಿದ್ದಾರೆ. ಪಾಕಿಸ್ತಾನದಲ್ಲಿ ಕೆಲವು ಪ್ರತಿಗಾಮಿ ಕೋಮುವಾದಿ ರಾಜಕೀಯ ಪಕ್ಷಗಳನ್ನು ಬಿಟ್ಟರೆ ಉಳಿದ ಎಲ್ಲಾ ರಾಜಕೀಯ ಪಕ್ಷಗಳು ಒಂದು ವೇದಿಕೆಗೆ ಬಂದು ಸರ್ವಾಧಿಕಾರಿಯನ್ನು ಎದುರಿಸಲು ಸರ್ವಸಿದ್ಧತೆಯನ್ನು ಮಾಡುತ್ತಿದ್ದಾರೆ. ವಿದ್ಯಾರ್ಥಿ ಮತ್ತು ಯುವಜನರಲ್ಲಿ ರಾಜಕೀಯ ಪ್ರಜ್ಞೆ ಬೆಳೆಯುತ್ತಿದೆ. ಇತ್ತೀಚೆಗೆ ಪಾಕಿಸ್ತಾನದಲ್ಲಿ ನಡೆದ ವಿದ್ಯಾರ್ಥಿ ಸಂಘಗಳ ಚುನಾವಣೆಯಲ್ಲಿ ಭುಟ್ಟೋರ ಪಕ್ಷವಾದ ಪಾಕಿಸ್ತಾನದ ಪೀಪಲ್ಸ್ ಪಕ್ಷದ ವಿದ್ಯಾರ್ಥಿ ಸಂಘಗಳು ಮತ್ತು ಕೆಲವು ಎಡಪಂಥೀಯ ವಿದ್ಯಾರ್ಥಿ ಸಂಘಗಳು ಭಾರೀ ಜಯಗಳಿಸಿವೆ. ಅಷ್ಟೇ ಅಲ್ಲದೆ ಕೆಲವು ಕಾಲದ ಹಿಂದೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಭುಟ್ಟೋ ಪಕ್ಷದ ಸಹಾನುಭೂತಿಪರರು ಅದ್ಭುತ ಜಯಗಳಿಸಿರುವುದನ್ನು ನೋಡಿದರೆ ಜಿಯಾ-ಉಲ್-ಹಕ್ ಅವರ ಕಾಲ ಸನ್ನಿಹಿತವಾಗಿದೆ ಎಂಬುದರ ಬಗ್ಗೆ ಸಂದೇಹವಿಲ್ಲ.

ಅನೇಕ ವರ್ಷಗಳಿಂದ ಪಾಕಿಸ್ತಾನದ ಜನತೆ ನಡೆಸುತ್ತಿರುವ ನ್ಯಾಯಯುತ ಹೋರಾಟಗಳನ್ನು ಮತ್ತು ಬೇಡಿಕೆಗಳನ್ನು ತಿರಸ್ಕರಿಸಿದ ಕಾರಣ ಜನರು ಉಗ್ರವಾದಿ ಸಾಹಸವಾದಕ್ಕೂ ಸಹ ಇಳಿಯುತ್ತಿದ್ದಾರೆ. ಇತ್ತೀಚೆಗೆ ವಿಮಾನ ಅಪಹರಣ ಮಾಡಿದ್ದು ಮತ್ತು ಕರಾಚಿ ಸ್ಟೇಡಿಯಂನಲ್ಲಿ ಪೋಪರು ಭಾಷಣಮಾಡುತ್ತಿದ್ದಾಗ ಬಾಂಬು ದಾಳಿಯನ್ನು ಮಾಡಿದ್ದು ಇದಕ್ಕೆ ನಿದರ್ಶನವಾಗಿದೆ.

ಪಾಕಿಸ್ತಾನದಲ್ಲಿನ ಈ ಸಮಸ್ಯೆ ಪಾಕಿಸ್ತಾನಕ್ಕೇ ಸೀಮಿತವೆಂದು ಯಾವ ರಾಜಕೀಯ ಪಂಡಿತರಾದರೂ ಅಭಿಪ್ರಾಯಪಟ್ಟರೆ ಅದು ಖಂಡಿತವಾಗಿಯೂ ತಪ್ಪಾಗುತ್ತದೆ. ಯಾರಾದರೂ ಏಷ್ಯಾ ಉಪಖಂಡದ ರಾಜಕೀಯ ಚರಿತ್ರೆಯನ್ನು 1947ರಿಂದೀಚೆಗೆ ಸೂಕ್ಷ್ಮವಾಗಿ ಗಮನಿಸಿದ್ದರೆ, ಅದರ ಜೊತೆಗೆ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಮತ್ತು ಪಶ್ಚಿಮದ ಇತರೆ ರಾಷ್ಟ್ರಗಳು ಈ ಉಪಖಂಡದಲ್ಲಿ ನಡೆಸುತ್ತಿರುವ ಚಟುವಟಿಕೆಗಳನ್ನು ಸರಿಯಾದ ರೀತಿಯಲ್ಲಿ ವಿಶ್ಲೇಷಣೆ ಮಾಡಿದ್ದರೆ ಈ ದುರಂತಗಳು ಪಾಕಿಸ್ತಾನಕ್ಕೆ ಮಾತ್ರವೇ ಸೀಮಿತವಲ್ಲವೆಂದು ಖಡಾಖಂಡಿತವಾಗಿ ಗೊತ್ತಾಗುತ್ತದೆ. ಈ ಉಪಖಂಡದಲ್ಲಿನ ಯಾವುದೇ ರಾಷ್ಟ್ರದಲ್ಲೂ ಎಲ್ಲ ಕಾಲಕ್ಕೂ ಪ್ರಜಾಪ್ರಭುತ್ವ ಸುರಕ್ಷಿತವಾಗಿ ಇರಲು ಸಾಧ್ಯವಾಗಿಲ್ಲ. ಶ್ರೀಲಂಕಾದಲ್ಲಿ ಶ್ರೀಮತಿ ಬಂಡಾರನಾಯಕೆಯವರ ಕಾಲದಲ್ಲಿ ತುರ್ತುಪರಿಸ್ಥಿತಿಯನ್ನು ತಂದು ಅಲ್ಲಿ ಪ್ರಜಾಪ್ರಭುತ್ವ ಮತ್ತು ನಾಗರೀಕ ಹಕ್ಕುಗಳನ್ನು ನಾಶಮಾಡಲಾಯಿತು. ಈಗಿನ ಜಯವರ್ಧನೆ ಅವರ ಸರ್ಕಾರವು ಪಾರ್ಲಿಮೆಂಟರಿ ಪದ್ಧತಿಯನ್ನು ಕಿತ್ತುಹಾಕಿ ಅಧ್ಯಕ್ಷೀಯ ಪದ್ಧತಿಯನ್ನು ತಂದು ಈಗ ಅಲ್ಲಿನ ಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನಮಾಡುವ ಕಾರ್ಯ ನಡೆಯುತ್ತಿದೆ. ಕಾರ್ಮಿಕರು ಮುಷ್ಕರ ಹೂಡುವ ಹಕ್ಕನ್ನು ಕಳೆದುಕೊಂಡಿದ್ದಾರೆ; ಬಾಂಗ್ಲಾ ದೇಶದಲ್ಲಿ ಅಸಮಾನ ತ್ಯಾಗ ಬಲಿದಾನಗಳಿಂದ ಸಂಪಾದಿಸಿದ್ದ ಪ್ರಜಾಪ್ರಭುತ್ವವು ಈಗ ಮಿಲಿಟರಿ ಸರ್ವಾಧಿಕಾರಕ್ಕೆ ಸಿಕ್ಕಿ ತತ್ತರಿಸಿದೆ. ಈಗ ಅಲ್ಲಿನ ಜನತೆಯು ಮತ್ತೆ ಪ್ರಜಾಪ್ರಭುತ್ವವನ್ನು ಪಡೆಯಲು ಹೋರಾಟದ ಹಾದಿಯನ್ನು ಹಿಡಿದಿದ್ದಾರೆ.

ಭಾರತದಲ್ಲಿ 1980ರ ಲೋಕಸಭಾ ಚುನಾವಣೆಯಲ್ಲಿ ಮರಳಿ ಅಧಿಕಾರಕ್ಕೆ ಬಂದ ಶ್ರೀಮತಿ ಇಂದಿರಾ ಗಾಂಧಿಯವರು, ಚುನಾವಣಾ ಸಮಯದಲ್ಲಿ ನೀಡಿದ ಯಾವುದೇ ಒಂದು ಆಶ್ವಾಸನೆಯನ್ನು ಸಹಾ ಕಾರ್ಯಗತ ಮಾಡಲು ಸಾಧ್ಯವಾಗಲಿಲ್ಲ. ಇದರಿಂದ ಭ್ರಮನಿರಸನಗೊಂಡ ಜನತೆ ಹೋರಾಟದ ಹಾದಿಯನ್ನು ಹಿಡಿದಿದ್ದಾರೆ. ಇನ್ನೊಂದು ಕಡೆ ಆರ್ಥಿಕ ಬಿಕ್ಕಟ್ಟು ತೀವ್ರವಾಗಿ ಆರ್ಥಿಕಕ್ಷೋಭೆ ಉಂಟಾಗಿದೆ. ಇದರ ವಿರುದ್ಧ ಕೆಲವು ರಾಜಕೀಯ ಪಕ್ಷಗಳು ಒಂದಾಗಿ ಹೋರಾಟದ ಕಾರ್ಯಕ್ರಮವನ್ನು ರೂಪಿಸಿವೆ. ಇಂದು ದೇಶದ ಎಲ್ಲಾ ವಿಭಾಗದ ಜನತೆಯು ಹೋರಾಟದ ಹಾದಿಯನ್ನು ಹಿಡಿದಿದ್ದಾರೆ. ಯಾವುದೇ ಸಮಸ್ಯೆಯನ್ನು ಪರಿಹಾರ ಮಾಡಲು ಸಾಧ್ಯವಿಲ್ಲದೇ ಹೋರಾಟಗಳನ್ನು ದಮನಮಾಡುವ ಕಾರ್ಯ ಪ್ರಾರಂಭವಾಗಿದೆ. ಅದರ ಫಲವಾಗಿ ರಾಷ್ಟ್ರೀಯ ಭದ್ರತಾಕಾಯಿದೆ ಮತ್ತು ಎಸ್.ಐ.ಸಿ. ಕಾರ್ಮಿಕರ ವೇತನ ಸ್ತಂಭನ ಕಾಯಿದೆ ಮುಂತಾದ ಕರಾಳ ಶಾಸನಗಳನ್ನು ತಂದು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕುಗೊಳಿಸುವ ಪ್ರಯತ್ನಮಾಡುತ್ತಿದ್ದಾರೆ. ಈಗಿನ ಸಮಸ್ಯೆಗಳನ್ನು ಪರಿಹಾರ ಮಾಡುವುದರಲ್ಲಿ ಪಾರ್ಲಿಮೆಂಟರಿ ಪದ್ಧತಿಯು ವಿಫಲವಾಗಿರುವುದರಿಂದ ಅಧ್ಯಕ್ಷೀಯ ಪದ್ಧತಿಯ ಸರ್ಕಾರವನ್ನು ತರಬೇಕೆಂಬ ಕೂಗು ಪ್ರಾರಂಭವಾಗಿದೆ. ದೇಶದ ನಾನಾ ಕಡೆಗಳಲ್ಲಿ ವಿಚ್ಛಿದ್ರಕಾರಿ ಶಕ್ತಿಗಳು ದೇಶದ ಐಕ್ಯತೆಗೆ ಭಂಗ ತರುವ ರೀತಿಯಲ್ಲಿ ಚಳುವಳಿಗಳು ಪ್ರಾರಂಭವಾಗಿವೆ. ಅವುಗಳನ್ನು ಸಮರ್ಪಕ ರೀತಿಯಲ್ಲಿ ಪರಿಹಾರ ಮಾಡಲು ಸಾಧ್ಯವಿಲ್ಲದೇ ದಮನಕಾರಿ ನೀತಿಯನ್ನು ಅನುಸರಿಸುತ್ತಿದೆ. ಈ ಎಲ್ಲಾ ಕಾರಣಗಳನ್ನು ಉಪಯೋಗಿಸಿಕೊಂಡು ಮತ್ತೆ 1975ರ ಪರಿಸ್ಥಿತಿಯನ್ನು ಪುನರಾವರ್ತನೆ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಇದಕ್ಕೆ ಪೂರಕವಾಗಿ 18-4-1981 ರಂದು ಬೊಂಬಾಯಿನ ಸಭೆಯೊಂದರಲ್ಲಿ ಮಾತನಾಡುತ್ತಾ ಶ್ರೀಮತಿ ಇಂದಿರಾ ಗಾಂಧಿಯವರು "ದೇಶಕ್ಕೆ ಯುದ್ಧ ಬರುತ್ತಿದೆ ಒಪ್ಪಿಕೊಳ್ಳಿ" ಎಂದು ಎಲ್ಲರಿಗೂ ಹೇಳಿದ್ದಾರೆ. ಈ ಎಲ್ಲಾ ಬೆಳವಣಿಗೆಗಳಿಂದ ಗೊತ್ತಾಗುವ ಸತ್ಯಾಂಶವೆಂದರೆ ಭಾರತದಲ್ಲೂ ಸಹಾ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಬಂದಿದೆ ಎಂಬುದು. ಇದನ್ನು ಎಲ್ಲರೂ ಒಪ್ಪಿಕೊಳ್ಳುವ ಪರಿಸ್ಥಿತಿ ಬರುವ ಕಾಲ ಬಹಳ ದೂರವಿಲ್ಲ. ಇದೇ ಸಮಯಕ್ಕೆ ಸರಿಯಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಭಾರತಕ್ಕೆ ಅಣು ಇಂಧನವನ್ನು ಕೊಡುವುದಿಲ್ಲವೆಂದು ಹೇಳಿ 1966 ಒಪ್ಪಂದವನ್ನು ಮುರಿಯುವ ಘಟ್ಟಕ್ಕೆ ಹೋಗಿದ್ದಾರೆ. ಅದೇ ಕಾಲದಲ್ಲಿ ಪಾಕಿಸ್ತಾನಕ್ಕೆ ಯುದ್ಧಸಾಮಗ್ರಿಗಳನ್ನು ಕೊಡಲು ತೀರ್ಮಾನಿಸಿದ್ದಾರೆ.

ಇತ್ತೀಚೆಗೆ ಬ್ರಿಟಿಷ್ ಪ್ರಧಾನಿಯವರು ಭಾರತದ ಭೇಟಿಯ ಕಾಲದಲ್ಲಿ ಅವರು ತೆಗೆದುಕೊಂಡ ನಿಲುವು ಮತ್ತು ಅವರು ಆಡಿದ ಮಾತುಗಳನ್ನು ಅರ್ಥೈಸಿದರೆ ಸಾಮ್ರಾಜ್ಯಶಾಹಿಗಳು ಒಂದು ಭಯಂಕರ ಪಿತೂರಿಯನ್ನು ನಡೆಸಿ ಪಾಕಿಸ್ತಾನದ ಮುಖಾಂತರ ಏಷಿಯಾದ ಉಪಖಂಡದಲ್ಲಿ ಯುದ್ಧ ಭೀತಿಯನ್ನು ಹುಟ್ಟಿಸಿ ಅದನ್ನು ಬಲಪಡಿಸುತ್ತಿದ್ದಾರೆ. ಈ ಎಲ್ಲಾ ವಿದ್ಯಾಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಪ್ರಜಾಪ್ರಭುತ್ವಹರಣ ಪಾಕಿಸ್ತಾನಕ್ಕೆ ಸೀಮಿತವಲ್ಲ. ಈ ಉಪಖಂಡದ ಇತರೆ ರಾಷ್ಟ್ರಗಳಿಗೂ ಅದು ವ್ಯಾಪಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಸಾಮ್ರಾಜ್ಯಶಾಹಿಗಳ ಈ ಕುತಂತ್ರದ ವಿರುದ್ಧ ಮತ್ತು ದೇಶೀಯ ಸರ್ವಾಧಿಕಾರಿಗಳ ವಿರುದ್ಧ ಹೋರಾಟ ಮಾಡಲು ಎಲ್ಲಾ ರಾಜಕೀಯ ಪಕ್ಷಗಳು ಅದರಲ್ಲೂ ಮುಖ್ಯವಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದುಗೂಡಬೇಕಾಗಿದೆ.

●

ಕೊಲೆಗಡುಕ ಸರಕಾರ ಕೆಳಗಿಳಿಯಲಿ

ದಿನದಿನವೂ ಗುಂಡೇಟಿನಿಂದ ದುಡಿಯುವ ಜನರನ್ನು ಬಲಿತೆಗೆದುಕೊಳ್ಳುವಲ್ಲಿ ದಾಖಲೆಸ್ಥಾಪಿಸುತ್ತಿರುವ ಗುಂಡೂರಾವ್ ಸರಕಾರ ಕೂಡಲೇ ಕೆಳಗಿಳಿಯಬೇಕು ಎಂದು ಪ್ರಗತಿಪರ ಜನತಂತ್ರರಂಗದ ಹೋರಾಟಸಮಿತಿಯ ಪರವಾಗಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಜನತಂತ್ರರಂಗದ ಸಂಚಾಲಕರುಗಳು ಒತ್ತಾಯಿಸಿದ್ದಾರೆ.

ದಿನಾಂಕ 13-4-81ರಂದು ಬೆಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಜನತಂತ್ರರಂಗದ ಮುಖಂಡರು ಇತ್ತೀಚೆಗೆ ನಿಪ್ಪಾಣಿಗೆ ಭೇಟಿಯಿತ್ತು ಪರಿಸ್ಥಿತಿಯನ್ನು ಪರಿಶೀಲಿಸಿದ್ದರು. ನಿಪ್ಪಾಣಿಯ ಗೋಳಿಬಾರನ್ನು ಗುಂಡೂರಾಯರು ಸಮರ್ಥಿಸಿಕೊಳ್ಳುತ್ತಿರುವುದು ಜನತಂತ್ರದ ಕೊನೆಮಾಡಲು ಹೊರಟಂತೆಯೇ ಎಂದು ಆರೋಪಿಸಿದ್ದಾರೆ. ಗೋಳಿಬಾರ್ ಪ್ರಕರಣಗಳ ಬಗ್ಗೆ ಕೂಡಲೇ ನ್ಯಾಯಾಂಗ ತನಿಖೆಯಾಗಬೇಕು. ರಾಜ್ಯದಲ್ಲಿ ಬಂಧಿತರಾಗಿರುವ ರೈತರು ಹಾಗೂ ರೈತಮುಖಂಡರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಕಾಂ. ಎಂ. ಕೆ. ಭಟ್, ಶ್ರೀ ಚಂದ್ರೇಗೌಡ ಮತ್ತು ಕಾಂ. ಎಂ. ಸಿ. ವೆಂಕಟ್ರಾಂ ಹಾಜರಿದ್ದರು.

ರಾಜ್ಯದ ಎಲ್ಲ ಜಿಲ್ಲಾಧಿಕಾರಿಯವರ ಕಚೇರಿ ಮುಂದೆ ಏಪ್ರಿಲ್ 20 ರಂದು ಸಾಮೂಹಿಕ ಧರಣಿ ನಡೆಸುವಂತೆ ಕರೆ ನೀಡಿರುವ ಜನತಂತ್ರರಂಗವು 12 ಅಂಶಗಳ ಬೇಡಿಕೆ ಜೊತೆಗೆ, ತಂಬಾಕು ಬೆಳೆಗಾರರ ಬೇಡಿಕೆಯನ್ನೂ ಸೇರಿಸಿಕೊಳ್ಳುವಂತೆ ತನ್ನ ಜಿಲ್ಲಾ ಘಟಕಗಳಿಗೆ ಕರೆ ನೀಡಿತ್ತು. ಅಲ್ಲದೇ ಏಪ್ರಿಲ್ 20ರ ಕಾರ್ಯಕ್ರಮವನ್ನು ಯಶಸ್ವಿಮಾಡುವಂತೆ ವಿನಂತಿಸಲಾಗಿತ್ತು.

○

ರಾಜ್ಯಾದ್ಯಂತ ಯಶಸ್ವೀ ಧರಣಿ ಸತ್ಯಾಗ್ರಹ

(1ನೇ ಪುಟದಿಂದ)

ನಡೆಸಲಾಯಿತು. ಪ್ರಾರಂಭದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಕಾಂ. ಲಕ್ಷ್ಮಣರೆಡ್ಡಿ, ಆರ್.ವೆಂಕಟರಾಮಯ್ಯ, ಪಿ. ವೆಂಕಟಗಿರಿಯಪ್ಪ ಮೊದಲಾದವರು ಮಾತನಾಡಿದರು. ಧರಣಿ ಸತ್ಯಾಗ್ರಹದಲ್ಲಿ ಕೆ.ಜಿ.ಎಫ್., ಮುಳಬಾಗಿಲು, ಕೋಲಾರ, ಶ್ರೀನಿವಾಸಪುರ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮುಂತಾದ ಕಡೆಗಳಿಂದ ರೈತರು ಕಾರ್ಮಿಕರು ಪಾಲ್ಗೊಂಡಿದ್ದರು.

ಧರಣಿ ಸತ್ಯಾಗ್ರಹದ ನೇತೃತ್ವ ವಹಿಸಿದ ಇತರರು ಕಾಂ. ಜಿ. ಪಾಪಣ್ಣ, ಎ. ವಿ. ಅಪ್ಪಸ್ವಾಮಿರೆಡ್ಡಿ, ಎಸ್. ಲಕ್ಷ್ಮಯ್ಯ, ಕೆ. ಎಂ. ವೆಂಕಟೇಶ್, ಜಿ. ದೊರೆಸ್ವಾಮಿ, ಶಬರೀದಾಸ್, ಅಶ್ವಥನಾರಾಯಣರೆಡ್ಡಿ, ಕೃಷ್ಣಮೂರ್ತಿ ಮೊದಲಾದವರು.

ಹೋರಾಟ ಸಮಿತಿಯ ಮುಂದಿನ ಸಭೆಯನ್ನು ಚಿಕ್ಕಬಳ್ಳಾಪುರದ ಟಿ.ಬಿ.ಯಲ್ಲಿ ನಡೆಸಬೇಕೆಂದು ನಿರ್ಧರಿಸಲಾಯಿತು. ಕೊನೆಯಲ್ಲಿ ಕಾಂಗ್ರೆಸ್ಸಿನ ಎಂ.ಎಲ್.ಸಿ. ಶ್ರೀ ಪೆರುಮಾಳ್ ಬಂದಿದ್ದರು.

ತುಮಕೂರು

ಏ. 20ರಂದು ನಾಲ್ಕು ವಿರೋಧಿ ಪಕ್ಷಗಳು ಸಭೆಸೇರಿ ತುಮಕೂರು ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ನಡೆಸಿದರು. ಹಲವು ತಾಲ್ಲೂಕುಗಳಿಂದ ಆಗಮಿಸಿದ್ದ ರೈತರ ಜೊತೆಗೆ ನಗರದ ಬೀಡಿ ಮತ್ತಿತರ ಕಾರ್ಮಿಕರು ಬೃಹತ್ ಸಂಖ್ಯೆಯಲ್ಲಿ ಸೇರಿ ಬಾಜಾಬಜಂತ್ರಿ ಸಮೇತ ನೂರಾರು ಮಹಿಳಾ ಕಾರ್ಮಿಕರನ್ನೊಳಗೊಂಡ ಮೆರವಣಿಗೆ ಜಿಲ್ಲಾಧಿಕಾರಿ ಕಚೇರಿ ಎದುರು ಸಮಾವೇಶಗೊಂಡಿತು. ಧರಣಿ ಪ್ರಾರಂಭಿಸಲಾಯಿತು. ಜಿಲ್ಲಾಧಿಕಾರಿಯವರು ಧರಣಿ ನಡೆದ ಸ್ಥಳಕ್ಕೆ ಬಂದು ಬೇಡಿಕೆಗಳ ಬಗ್ಗೆ ಚರ್ಚಿಸಿ ಮನವಿ ಸ್ವೀಕರಿಸಿದರು.

ಮಾಜೀ ಕಂದಾಯಮಂತ್ರಿ ಶ್ರೀ ಹುಚ್ಚಮಾಸ್ತಿಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ನಾರಾಯಣ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರಾದ ಕಾಂ. ಕೆ. ಆರ್. ನಾಯ್ಕ್, ಎಚ್. ಸಿ. ಚೆನ್ನಪ್ಪ, ಸಿ.ಪಿ.ಐ.ನ ಕಾಂ. ನರೇಂದ್ರ ಪ್ರಸಾದ್, ಶಿವಣ್ಣ ಮತ್ತು ಮಾಜೀ ಸಂಸತ್‌ಸದಸ್ಯ ಸಿ. ಆರ್. ಬಸಪ್ಪ ಮೊದಲಾದವರು ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದರು. ಶ್ರೀ ಲಿಂಗರಾಜರ ವಂದನಾರ್ಪಣೆಯೊಂದಿಗೆ ಧರಣಿ ಸತ್ಯಾಗ್ರಹ ಮುಕ್ತಾಯವಾಯಿತು.

ಬಿಜಾಪುರ

ಏ. 20ರಂದು 500ಕ್ಕೂ ಮೇಲ್ಪಟ್ಟ ರೈತ-ಕಾರ್ಮಿಕರು ಬಿಜಾಪುರ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ಅದರ ಪೂರ್ವಭಾವಿಯಾಗಿ ಡೋಲುಬಾರಿಸುತ್ತ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಲಾಯಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಎನ್.ಕೆ. ಉಪಾಧ್ಯಾಯ, ಭಾರತ ಕಮ್ಯುನಿಸ್ಟ್ ಪಕ್ಷದ ಕಾಂ. ಪ್ರಕಾಶ್ ಹಿಟ್ನಳ್ಳಿ, ರೈತಸಂಘದ ಕಾಂ. ಭೀಮಸಿ ಕಲಾದಗಿಯವರ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ನಿಪ್ಪಾಣಿ ಮತ್ತು ದುದ್ದದಲ್ಲಾದ ಗೋಲೀಬಾರನ್ನು ಖಂಡಿಸಿ, ಅದರ ನ್ಯಾಯಾಂಗ ವಿಚಾರಣೆಗೆ ಆಗ್ರಹಪಡಿಸಿದರು. ಮತಪ್ರದರ್ಶನಕಾರರನ್ನುದ್ದೇಶಿಸಿ ಜಕ್ರಿಯಾಸಾಬ್‌ಕಾಲೇಬಾಗ್, ಪಾಯಂನ ಚಂಚಲಕರ, ಭೀಮಸಿ ಕಲಾದಗಿ ಮತ್ತು ಎನ್.ಕೆ. ಉಪಾಧ್ಯಾಯ ಮೊದಲಾದವರು ಮಾತನಾಡಿದರು.

ರಾಜ್ಯದಾದ್ಯಂತ ಯಶಸ್ವೀ ಧರಣಿ ಸತ್ಯಾಗ್ರಹ ರಾಜ್ಯದ ರೈತಹೋರಾಟದಲ್ಲಿ ಮತ್ತೊಂದು ಮಜಲಾಗಿದೆ.

(ಉಳಿದ ವಿವರಗಳು ಮುಂದಿನವಾರ)



[ಮೇಲಿನ ಚಿತ್ರಗಳಲ್ಲಿನ (ಒಂದುಚಿತ್ರ ಮೊದಲನೇ ಪೇಜಿನಲ್ಲಿದೆ) ಸುಟ್ಟು ಕರಕಾದ ಶವಗಳು ಕಾಂಗ್ರೆಸ್ ಗೂಂಡಾಗಳ ಬಾಂಬ್ ಸ್ಫೋಟಕ್ಕೀಡಾದ ನಿರಪರಾಧಿಗಳದ್ದು. ಏಪ್ರಿಲ್ 3ರಂದು ಕಾಂಗ್ರೆಸ್ ಪ. ಬಂಗಾಲ್ ಬಂದ್‌ಗೆ ಕರೆ ನೀಡಿದಾಗ ವಿಧ್ವಂಸಕ ಕೃತ್ಯ ನಡೆಸಿದರು. ಮಾನವೀಯತೆ ಇಲ್ಲದ ಕಾಂಗ್ರೆಸ್ ಗೂಂಡಾಗಳು ಮಾಡಿದ ಬರ್ಬರ ಕೃತ್ಯಗಳಿಂದ ನಿರಪರಾಧಿಗಳು ಜೀವತೆತ್ತಿದ್ದಾರೆ. ಕಾಂಗ್ರೆಸ್ ಹಿಂಸಾಚಾರ ಪ್ರತಿಭಟಿಸಿ ಎಡರಂಗ ಮತ್ತು ಸಿ.ಪಿ.ಐ. ಮೊದಲಾದ ಪಕ್ಷಗಳು ಸೇರಿ ಏಪ್ರಿಲ್ 5ರಂದು ಬೃಹತ್ ರ್‍ಯಾಲಿ ಹೊರಡಿಸಿದ್ದವು].

ಅಘೋಷಿತ ತುರ್ತುಪರಿಸ್ಥಿತಿ

ಇನ್ನೊಂದು ಕರಾಳ ಶಾಸನ

ದಿವಾಳಿಖೋರ ಆರ್ಥಿಕ ನೀತಿಯಿಂದ ದಿವಾಳಿಯೆದ್ದಿರುವ ರೈತಾಪಿ ವರ್ಗಕ್ಕೆ ಗುಂಡೂರಾವ್ ಸರಕಾರ ಇನ್ನೊಂದು ಕರಾಳ ಶಾಸನ ಹೊರಡಿಸಿ ಪ್ರಹಾರವೆಸಗಿದೆ. ದೇಶದ ಯಾವ ರಾಜ್ಯದಲ್ಲೂ ಇಲ್ಲದ ಈ ಕರಾಳ ಶಾಸನದ ವಿರುದ್ಧ ಉಗ್ರ ಹೋರಾಟಕ್ಕೆ ಜನತೆ ಸಿದ್ಧವಾಗುವುದು ಅವಶ್ಯವಿದೆ.

"ಸರಕಾರಿ ಅಥವಾ ಸಹಕಾರಿ ಇಲ್ಲವೆ ಸ್ಥಳೀಯ ಸಂಸ್ಥೆಗಳ ಮತ್ತು ವಿದ್ಯುತ್ ಮಂಡಳಿಯ ತೆರಿಗೆ, ಸಾಲಗಳನ್ನು ನಿರಾಕರಿಸಿದರೆ, ಸಲ್ಲಿಸುವುದನ್ನು ಮುಂದೂಡುವಂತೆ ಪ್ರಚೋದಿಸಿದರೆ ಐದು ಸಾವಿರ ರೂ. ದಂಡ ಇಲ್ಲವೆ ಐದು ವರ್ಷಗಳ ಶಿಕ್ಷೆ ಅನುಭವಿಸಬೇಕಾಗುತ್ತದೆ". ಇದು ಕರ್ನಾಟಕ ರಾಜ್ಯಪಾಲರು ಹೊರಡಿಸಿದ ಸುಗ್ರೀವಾಜ್ಞೆ.

ಕೇಂದ್ರ ಸರಕಾರಿ ಉದ್ದಿಮೆಗಳ ನೌಕರರಿಗೆ ನೀಡಿದ್ದ ಭರವಸೆಯನ್ನು ಪೂರೈಸದೇ ಕಾರ್ಮಿಕವರ್ಗಕ್ಕೆ ಮೋಸಮಾಡಿದ ಮುಖ್ಯಮಂತ್ರಿ ಈಗ ರೈತಾಪಿ ವರ್ಗವನ್ನು ಕೆಣಕಲು ಹೊರಟಿರುವುದು. ರೈತ ಚಳುವಳಿ, ಮುಖಂಡರ ಮೇಲೆ ಯಾವ ಜವಾಬ್ದಾರಿ ವ್ಯಕ್ತಿಯೂ ಮಾತನಾಡಬಾರದ ಅಸಭ್ಯ ಹೇಳಿಕೆಗಳನ್ನು ಬೊಗಳುತ್ತಿದ್ದಾರೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ, ಸರಕಾರ ಜನತೆಯ ವಿರೋಧಿಯಾಗಿದ್ದರೆ, ಹೋರಾಟ ಮಾಡುವುದು ಜನತೆಯ ಹಕ್ಕು. ತೆರಿಗೆ ತಪ್ಪಿಸಿಕೊಳ್ಳುವ ಕಾಳಸಂತೆಯ ಖದೀಮರಿಗೆ ಬೇರರ್ ಬಾಂಡನ್ನು ನೀಡಲಾಗುತ್ತಿದೆ. ಆ ಖದೀಮರಿಗೆ ಶಿಕ್ಷೆ-ದಂಡ ಯಾವುದೂ ಇಲ್ಲ. ಅಸ್ತಿತ್ವಕ್ಕಾಗಿ ಅನವರತ ಹೋರಾಡಬೇಕಾಗಿರುವ ಸಾಮಾನ್ಯ ರೈತನಿಗೆ ಈ ಶಿಕ್ಷೆ!

ಈ ಕರಾಳ ಶಾಸನದ ಉದ್ದೇಶ ಸ್ಪಷ್ಟ. ಬೆಳೆಯುತ್ತಿರುವ ಜನಪರ ಹೋರಾಟಗಳನ್ನು ಹತ್ತಿಕ್ಕುವುದು. ಮುಖ್ಯಮಂತ್ರಿ ವಿವೇಚನೆ ಇಲ್ಲದೆ ಕಾರ್ಯವೆಸಗುತ್ತಿದ್ದಾರೆ. ಬಾಯಿಗೆ ಬಂದದ್ದನ್ನು ಬೊಗಳುತ್ತಿದ್ದಾರೆ. ಇತ್ತೀಚೆಗೆ ಕಾಗೋಡು ಸತ್ಯಾಗ್ರಹದ ದಿನಾಚರಣೆ (ಸಾಗರದಲ್ಲಿ)ಯ ಸಂದರ್ಭದಲ್ಲಿ ದಿನನಿತ್ಯ ರೈತರು, ಕಾರ್ಮಿಕರ ಮೇಲೆ ಗುಂಡಿನ ಸುರಿಮಳೆಗೆರೆಯುತ್ತಿರುವ ಗುಂಡೂರಾಯರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಮಾರಂಭದ ಉದ್ಘಾಟನೆಗೆ ಯಾವ ನೈತಿಕ ಹಕ್ಕೂ ಕಾಂಗ್ರೆಸ್ಸಿನವರಿಗಿಲ್ಲ. ಅಂದು ಮುಖ್ಯಮಂತ್ರಿ ಮಾತನಾಡಿದ ಮಾತುಗಳಂತೂ ಪ್ರಜ್ಞಾವಂತರು ತಲೆತಗ್ಗಿಸುವಂತಾದ್ದು.

ರಾಜ್ಯದಲ್ಲಿ ಜನತೆ ಜಾಗೃತವಾಗುತ್ತಿದೆ. ಮೊಳಕೆಯಾಡುತ್ತಿರುವ ಚಳುವಳಿಯನ್ನು ಹೊಸಕಿ ಹಾಕದಂತೆ ನೋಡಲು ಸರ್ವತ್ಯಾಗಕ್ಕೂ ಸಿದ್ಧರಾಗಬೇಕಾಗಿದೆ.

ಈ ಕರಾಳಶಾಸನವನ್ನು ಉಗ್ರವಾಗಿ ಖಂಡಿಸಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರು ಮೇ ಮೊದಲ ವಾರದಲ್ಲಿ ಸೇರಲಿರುವ ಪಕ್ಷದ ರಾಜ್ಯಸಮಿತಿ ಈ ದಿಶೆಯಲ್ಲಿ ಹೋರಾಟಕ್ಕೆ ಕಾರ್ಯಕ್ರಮ ರೂಪಿಸಲಿದೆ ಎಂದು ತಿಳಿಸಿರುವರು.

ಅಭೂತಪೂರ್ವ ರ್‍ಯಾಲಿ

ಏಪ್ರಿಲ್ 3ರಂದು ಪ. ಬಂಗಾಳ ಬಂದ್‌ಗೆ ಕರೆಕೊಟ್ಟು ಜನಜೀವನ ಅಸ್ತವ್ಯಸ್ತಗೊಳಿಸಿ ಬಾಂಬ್‌ಸ್ಫೋಟಗೊಳಿಸಿ ನಿರಪರಾಧಿ ಜನರ ಸಾವಿಗೆ ಕಾರಣವಾದ ಕಾಂಗ್ರೆಸಿನವರ ಹಿಂಸಾಚಾರ ಪ್ರತಿಭಟಿಸಿ ಏಪ್ರಿಲ್ 5ರಂದು ಕಲಕತ್ತೆಯಲ್ಲಿ ಲಕ್ಷಾಂತರ ಜನರ ಮೌನಮೆರವಣಿಗೆ ಹೊರಡಿಸಲಾಗಿತ್ತು.

ಎಡರಂಗ ಮತ್ತು ಸಿ.ಪಿ.ಐ. ಸೇರಿ ಈ ಮೌನ ರ್‍ಯಾಲಿಗೆ ಕರೆಕೊಟ್ಟಿದ್ದವು. ಕಲಕತ್ತೆಯ ದೇಶಪ್ರಿಯ ಪಾರ್ಕಿನಲ್ಲಿ ರ್‍ಯಾಲಿಯಲ್ಲಿ ಭಾಗವಹಿಸಲು ಜನತೆ ಧಾವಿಸುತ್ತಿತ್ತು. ಮೆರವಣಿಗೆಯಲ್ಲಿ ಹೊರಡುವ ಮೊದಲು ಹಿಂಸಾಚಾರಕ್ಕೆ ಬಲಿಯಾದವರ ಸ್ಮರಣೆಗಾಗಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಶಾಂತಿಯನ್ನು ಕದಡುವ ಮತ್ತು ಜನಪ್ರಿಯ ಸರಕಾರ ಉರುಳಿಸುವ ಕಾಂಗ್ರೆಸ್ ಸಂಚನ್ನು ವಿರೋಧಿಸಿ ಕಾಂ. ಸರೋಜ್ ಮುಖರ್ಜಿಯವರು ಮಂಡಿಸಿದ ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಯಿತು.

ಏಪ್ರಿಲ್ 5ರಂದು ಮಧ್ಯಾಹ್ನ ಸರಿಯಾಗಿ 3-45ಕ್ಕೆ ಮೆರವಣಿಗೆ ಪ್ರಾರಂಭವಾಯಿತು. ಸುಮಾರು ಒಂದುಲಕ್ಷ ಸ್ವಯಂಸೇವಕರು ಇದ್ದರು. ಕಾರ್ಮಿಕರು, ನೌಕರರು, ಹೆಂಗಸರು ಮಕ್ಕಳು ಕೆಂಬಾವುಟಗಳನ್ನು ಹಿಡಿದು ಸಾಗಿದ್ದರು. ಕೆಲವರು ಹಿಂಸಾಚಾರ ಪ್ರತಿಭಟಿಸಲು ಪ್ರತಿಭಟನಾ ಸಂಕೇತವಾಗಿ ಕಪ್ಪುಬಾವುಟ ಹಿಡಿದಿದ್ದರು. ಈ ಅಪೂರ್ವ ಮೆರವಣಿಗೆಯನ್ನು ಕುರಿತು ಕಾಂ. ಪ್ರಮೋದ್‌ದಾಸ್ ಗುಪ್ತಾರು "ಈ ತರದ ಮೆರವಣಿಗೆಯನ್ನು ನಾನು ಕಂಡಿರಲಿಲ್ಲ" ಎಂದು ಉದ್ಗರಿಸಿದರು. ಈ ಅಪೂರ್ವ (ಸುಮಾರು 20 ಕಿ.ಮೀ.)ಮೆರವಣಿಗೆ ದೇಶಬಂಧು ಪಾರ್ಕಿನಲ್ಲಿ ಸಮಾವೇಶಗೊಂಡಾಗ ಸಮಯ 8 ಘಂಟೆಯಾಗಿತ್ತು.

○

ಸಂಪಾದಕೀಯ

(1ನೇ ಪುಟದಿಂದ)

ಕಡೆಗಣಿಸಿ ಕಾನೂನನ್ನು ಲೋಕಸಭೆಯಲ್ಲೂ, ರಾಜ್ಯಸಭೆಯಲ್ಲೂ ಪಾಸು ಮಾಡಿತು. ಈ ಕಾನೂನು ಕಾರ್ಮಿಕವರ್ಗಕ್ಕೆ ಸವಾಲಿನಂತಿದೆ. ಕೋರ್ಟಿಗೆ ಕೊಟ್ಟ ಆಶ್ವಾಸನೆಗಳನ್ನೆಲ್ಲಾ ಉಲ್ಲಂಘಿಸಿ ಕಾರ್ಮಿಕರಿಗೂ, ನ್ಯಾಯಾಲಯಕ್ಕೂ ಪ್ರತ್ಯಕ್ಷ ವಿರೋಧವನ್ನು ವ್ಯಕ್ತಪಡಿಸಿದೆ. ಏಪ್ರಿಲ್ 15ರಂದು ಒಂದು ವಾರದೊಳಗೆ ಬೋನಸ್ಸನ್ನು ಕಡ್ಡಾಯವಾಗಿ ವಿತರಣೆ ಮಾಡಬೇಕೆಂದು ನ್ಯಾಯಾಲಯ ಕೊಟ್ಟ ಆದೇಶವನ್ನೂ ಮುರಿಯಲು ಸರಕಾರ ನಡೆಸಿದ ಸಂಚೂ ಈಗ ವಿಫಲವಾಗಿದೆ.

ಸರ್ಕಾರಕ್ಕೂ ನ್ಯಾಯಾಲಯಕ್ಕೂ ಈಗ ವಿರಸ ಸ್ಪಷ್ಟವಾಗಿದೆ. ಮೂಲಭೂತವಾಗಿ ಇದು ಕಾರ್ಮಿಕವರ್ಗದ ಮೂಲಭೂತ ಹಕ್ಕಿನ ಪ್ರಶ್ನೆಯಾಗಿದೆ. ಸರ್ಕಾರದ ಈ ಕಾರ್ಮಿಕ ವಿರೋಧ ನೀತಿಯನ್ನು ಎದುರಿಸಲೇಬೇಕು. ಇದು ಎಲ್.ಐ.ಸಿ. ನೌಕರರ ಪ್ರಶ್ನೆಯಷ್ಟೇ ಅಲ್ಲ. ಇಡೀ ಕಾರ್ಮಿಕವರ್ಗದ ಪ್ರಶ್ನೆಯಾಗಿದೆ. ಈ ಕಾರ್ಮಿಕ ವಿರೋಧಿ ನೀತಿಯನ್ನೆದುರಿಸಲು ಎಲ್ಲರೂ ಒಂದಾಗಿ ಹೋರಾಡೋಣ.

○

Printed by P. Ramachandra Rao at Nutan Printing Publishing & Training Centre, 485, Sampige Road, Malleswaram, Bangalore-560003, and Published by himself on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053. Editorial and managerial office : L-56, K. V. Temple Street, Sultanpet, Bangalore-560 053. Phone : 24854
EDITOR : M. K. BHAT